ಭಾರತ ಸರ್ಕಾರ

# ಮಿಷನ್ ವಾತ್ಸಲ್ಯ

ಸಾವದಂತ ಸಂರಕ್ಷಣಂ

ಸತ್ಯಮೇವ ಜಯತೇ

**ಅನುಷ್ಠಾನ ಮಾರ್ಗಸೂಚಿಗಳು.**

ಹೊಸ ಉದಯದ ಕಡೆಗೆ


ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ
ಭಾರತ ಸರ್ಕಾರ

## ಮುಖ್ಯ ಈ ಕೆಳಗಿನ ಕಾಯ್ದೆಗಳ ಅನುಷ್ಠಾನದ ಹೊಣೆಗಾರಿಕೆ ಇತರ ಸಚಿವಾಲಯ ಮತ್ತು ಇಲಾಖೆಗಳ ಸಹಭಾಗಿತ್ವದಲ್ಲಿ.

1. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015. (ತಿದ್ದುಪಡಿ 2021)
2. ಬಾಲ್ಯವಿವಾಹ ನಿಷೇಧ ಕಾಯ್ದೆ–2006.
3. ಬಾಲ್ಯವಿವಾಹ ನಿಷೇಧ(ಕರ್ನಾಟಕ) ತಿದ್ದುಪಡಿ ಕಾಯ್ದೆ–2016.
4. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012.
5. ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ–1986 (2016ರ ತಿದ್ದುಪಡಿ)
6. ಅನೈತಿಕ ಮಾನವ ಕಳ್ಳಸಾಗಾಣಿಕೆ ತಡೆ ಕಾಯ್ದೆ–1956–1986
7. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ–2005.
8. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ–2009.

9. **HAMA**-**Hindu Adoptions and Maintenance Act-1956**
10. **GAWA**-**Guardians and Wards Act -1890**
11. **PCPNDT**-**Pre-Conception and Pre-Natal Diagnostic Techniques Act. 1994**

And it rules and regulations.



# ಕಡ್ಡಾಯ: ಮಾತುಕತೆ ಸಾಧ್ಯವಿಲ್ಲ.

1. ಮಿಷನ್ ವಾತ್ಸಲ್ಯ ಯೋಜನೆಯ ದಾಖಲೆಯನ್ನು ಸಂಪೂರ್ಣವಾಗಿ ಓದುವುದು.
2. DC/CEO-ZP/SP Direct ಸಂಬಂಧ ಬೆಳೆಸುವುದು.
3. 22 ಇಲಾಖೆಗಳ 5 ಸ **ಸಹಭಾಗಿತ್ವ/ಸಮನ್ವಯತೆ/ಸಹಯೋಗ/ಸಹಕಾರ ಮತ್ತು ಸಂಯೋಜನೆ ಪಡೆಯುವುದು.**
4. 2021 ರ ಕಾಯ್ದೆಯ ಮತ್ತು 2022 ನಿಯಮದ ಬದಲಾವಣೆಗಳನ್ನು ಅನುಷ್ಠಾನಕ್ಕೆ ತರುವುದು.
5. ಮಕ್ಕಳ ಪೋಷಣೆ ಮತ್ತು ರಕ್ಷಣಾ ಕೇಂದ್ರಗಳಲ್ಲಿ (CCIs) ಸ್ವಚ್ಚತೆ, ಶೌಚಾಲಯ, ಊಟೋಪಚಾರ ಮತ್ತು ವೈಯುಕ್ತಿಕ ಕಡತ ನಿರ್ವಹಣೆ.
6. ನಿರಂತರ ವರದಿ ಮಾಡುವುದು, ವರದಿ ಸಂಗ್ರಹಿಸುವುದು ಕ್ರೋಢೀಕರಿಸುವುದು.
7. ನಿರಂತರ **ಪರಿಶೀಲನೆ, ಮೇಲ್ವಿಚಾರಣೆ, ಅನುಸರಣೆ** ಮತ್ತು **ಕ್ರಮಕ್ಕಾಗಿ ಯೋಜನೆ.**

## ನೆನಪಿಡಲೇಬೇಕಾದ ಅಂಶಗಳು

- ಮಕ್ಕಳನ್ನು CWC ಗೆ **ಹಾಜರುಪಡಿಸುವಾಗ ಬಳಸಬೇಕಾದ** – **Form – 17**
- CCI ಗೆ ಮಕ್ಕಳನ್ನು **ದಾಖಲಿಸಲು** CWC ನೀಡುವ ಆದೇಶ – **Form – 18**
- ಮಕ್ಕಳನ್ನು JJB ಗೆ **ಹಾಜರುಪಡಿಸುವಾಗ ಬಳಸಬೇಕಾದ** – **Form -1**
- Order for SIR By JJB for CCL Children's - **Form - 5**
- SIR Writing for CCL Children's - **Form - 6**
- CNCP SIR Order - **Form - 21**
- CNCP Children's SIR Writing - **Form - 22**
- ICP for CNCP/CCL - **Form - 7**
- Case History - **Form - 43**
- CCIs Inspection Report - **Form - 46**
- CWC 3 Months Report - **Form -16**
- CWC Monthly - **Form - 16a**
- CCL Child case file Important Form in the Top – **Form – 11**
- JJB 3 Month Report - **Form -12**
- **Rehabilitation Card for CNCP/CCL Should Write By CWC and JJB Members Only- FORM - 14**

# Case Management and Standard Of Care In CCIs:

**ಮಕ್ಕಳ ಪೋಷಣೆ ಮತ್ತು ರಕ್ಷಣಾ ಕೇಂದ್ರಗಳಲ್ಲಿ**

**ಪ್ರಮಾಣಿತ ಗುಣಮಟ್ಟದ ಪೋಷಣೆ ಮತ್ತು ರಕ್ಷಣೆ ಹಾಗೂ ವೈಯಕ್ತಿಕ ಕಡತ ನಿರ್ವಹಣೆ.**

**CNCP- CCIs minimum following Documents Are Mandatory**

FORM NO - 17
FORM NO - 18
FORM NO - 21
FORM NO – 22 (SIR)
FORM NO - 7
FORM NO – 14 (Rehabilitation Card)
FORM NO – 43 (Case History)

**Every year child 2 photo (Half one, full One)**

**Other than above documents 46 documents should properly maintained and filed.**

**CCL – OH, minimum following Documents Are Mandatory**

FORM NO - 1 (SBR)
FORM NO - 5
FORM NO – 6 (SIR)
FORM NO – 7 (ICP)
FORM NO - 11
FORM NO – 14 (Rehabilitation Card)
FORM NO – 43 (Case History)

**Every year child 2 photo (Half one, full One)**

**Other than above documents 46 documents should properly maintained and filed.**

# ಆಶಯ

- ಮಕ್ಕಳ ನ್ಯಾಯ ವ್ಯವಸ್ಥೆಯ ಕಡ್ಡಾಯ ವ್ಯವಸ್ಥಿತ ಅಭಿವೃದ್ಧಿ ಹಾಗೂ ಬಲಗೊಳಿಸುವಿಕೆಯನ್ನು ಖಾತ್ರಿಪಡಿಸುವ **ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ** ಹಾಗೂ **ಮಕ್ಕಳ ದತ್ತುವಿನ ಹೇಗ್ ಒಡಂಬಡಿಕೆಗಳಂತಹ** ಪ್ರಮುಖ ಅಂತಾರಾಷ್ಟ್ರೀಯ ಒಡಂಬಡಿಕೆಗಳಿಗೆ ಸಹಿ ಹಾಕಿರುವಂತೆ ಅದನ್ನು ಎಲ್ಲಾ ಮಕ್ಕಳಿಗೆ ಖಾತ್ರಿಪಡಿಸುವುದು.

- ಮಿಷನ್ ವಾತ್ಸಲ್ಯ ಯೋಜನೆಯು **ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ (ಎಸ್.ಡಿ.ಜಿ)** ಪೂರಕವಾಗಿ ಮಕ್ಕಳ ಅಭಿವೃದ್ಧಿ ಹಾಗೂ ಮಕ್ಕಳ ಸಂರಕ್ಷಣೆಯ ಆದ್ಯತೆಗಳನ್ನು ಸಾಧಿಸುವ ಒಂದು ಮಾರ್ಗಸೂಚಿಯಾಗಿದೆ.

**2009–10ಕ್ಕೂ ಮುಂಚೆ, ಸಚಿವಾಲಯದಡಿ ಈ ಕೆಳಕಂಡ ಮೂರು ಯೋಜನೆಗಳು ಅನುಷ್ಠಾನದಲ್ಲಿದ್ದವು.**

- ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳಿಗಾಗಿ ಹಾಗೂ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗಾಗಿ ಮಕ್ಕಳ ನ್ಯಾಯ ಹಾಗೂ ಮಕ್ಕಳ ಪೋಷಣೆ ಮತ್ತು ರಕ್ಷಣೆ ಕಾರ್ಯಕ್ರಮ;
- ಬೀದಿ ಮಕ್ಕಳಿಗಾಗಿ ಸಮಗ್ರ ಕಾರ್ಯಕ್ರಮ; ಹಾಗೂ
- ಶಿಶು ಗೃಹಗಳಿಗೆ ಸಹಾಯ ನೀಡುವ ಯೋಜನೆ.

- ಈ ಮೂರೂ ಯೋಜನೆಗಳನ್ನು **ರಾಷ್ಟ್ರೀಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐಸಿಪಿಎಸ್)** ಎಂಬ ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಡಿ ಅನುಷ್ಠಾನಗೊಳಿಸಲಾಗಿತ್ತು. ಐಸಿಪಿಎಸ್ ಅನ್ನು 2009–10ರಲ್ಲಿ ಸಚಿವಾಲಯ ಅನುಷ್ಠಾನಗೊಳಿಸಿತ್ತು. ನಂತರದಲ್ಲಿ, 2017ರಲ್ಲಿ ಈ ಯೋಜನೆಯನ್ನು **'ಮಕ್ಕಳ ರಕ್ಷಣಾ ಸೇವೆಗಳು' (ಸಿಪಿಎಸ್)** ಎಂದು ಮರುನಾಮಕರಣಗೊಳಿಸಲಾಯಿತು. ಈ ಸಿಪಿಎಸ್ ಯೋಜನೆಯನ್ನು ಪ್ರಸ್ತುತ, ಅಂದರೆ 2021–22ರಿಂದ **'ಮಿಷನ್ ವಾತ್ಸಲ್ಯ'** ಯೋಜನೆಯಡಿ ವಿಲೀನಗೊಳಿಸಲಾಗಿದೆ.

# ಪ್ರಮುಖ ಅಂಶಗಳು

- ಗುರಿ– 1 (MOTTO)
- ಕಾಣ್ಕೆ – 1
- ಧ್ಯೇಯ – 1
- ಧ್ಯೇಯದ ಗುರಿಗಳು – 4
- ಉದ್ದೇಶಗಳು – 11

# Motto- ಗುರಿ

## Leave No Child Behind

## ಯಾವುದೇ ಮಗುವನ್ನೂ ಬಿಡಬೇಡಿ (ನಿರ್ಲಕ್ಷ್ಯಸದಿರಿ)

## 1.1 ಕಾಣ್ಕೆ (Vision) ದೃಷ್ಟಿಕೋನ

- ಭಾರತದಲ್ಲಿರುವ ಪ್ರತಿಯೊಂದು ಮಗುವಿಗೂ ಆರೋಗ್ಯ ಹಾಗೂ ಸಂತೋಷಕರವಾದ ಬಾಲ್ಯ ಒದಗುವುದನ್ನು ಖಾತ್ರಿಪಡಿಸುವುದು, ಸುಸ್ಥಿರವಾದ ರೀತಿಯಲ್ಲಿ, ಸಂಪೂರ್ಣ ಸಾಮರ್ಥ್ಯತೆಯನ್ನು ಕಂಡುಕೊಳ್ಳಲು ಅವರಿಗೆ ಅವಕಾಶಗಳು ದೊರಕುವುದನ್ನು ಖಾತ್ರಿಪಡಿಸುವುದು ಹಾಗೂ ಎಲ್ಲಾ ರೀತಿಯಲ್ಲೂ ಅಭಿವೃದ್ಧಿ ಹೊಂದುವುದನ್ನು ಖಾತ್ರಿಪಡಿಸುವುದು. ಮಿಷನ್ ವಾತ್ಸಲ್ಯವು ಮಕ್ಕಳಿಗೆ ಸಾಂಸ್ಥೀಕರಣವು ಕೊನೆಯ ತಂತ್ರ ಎಂಬ ತತ್ವವನ್ನು ಆಧರಿಸಿ ಕಷ್ಟಕರ ಪರಿಸ್ಥಿತಿಗಳಲ್ಲಿ ಮಕ್ಕಳನ್ನು ಕುಟುಂಬ–ಆಧಾರಿತ ಸಾಂಸ್ಥಿಕೇತರ ಪೋಷಣೆಯನ್ನು ಪ್ರೋತ್ಸಾಹಿಸುತ್ತದೆ.

## 1.2 ಧ್ಯೇಯ (Mission)

- ಮಕ್ಕಳ ಬೆಳವಣಿಗೆ ವಿವಿಧ ವಯಸ್ಸು ಹಾಗೂ ವಿವಿಧ ಹಂತಗಳಲ್ಲಿ, ಸೂಕ್ಷ್ಮ, ಬೆಂಬಲಾತ್ಮಕ ಹಾಗೂ ಹೊಂದಾಣಿಕೆಯಾಗುವಂತಹ ಪರಿಸರ ವ್ಯವಸ್ಥೆಯ ಪೋಷಣೆಯ ಹಂತಗಳಲ್ಲಿ ಸಾಗುತ್ತದೆ. ಇದನ್ನು ಖಾತ್ರಿಪಡಿಸಲು, ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳ ಸಾಂಸ್ಥಿಕ ಚೌಕಟ್ಟನ್ನು ಬಲಪಡಿಸುವುದು ಹಾಗೂ ದೇಶದ ಎಲ್ಲಾ ಜಿಲ್ಲೆಗಳಲ್ಲಿಯೂ ಕಾನೂನುಬದ್ಧ ಹಾಗೂ ಸೇವಾ ವಿತರಣೆಯ ವ್ಯವಸ್ಥೆಗಳ ಮೂಲಕ ಈ ಧ್ಯೇಯ ಈಡೇರಿಸುವ ಆಶಯವನ್ನು ಹೊಂದಿದೆ. ಕಷ್ಟದ ಪರಿಸ್ಥಿತಿಯಲ್ಲಿರುವ ಮಕ್ಕಳನ್ನು ಕಾನೂನುಬದ್ಧ ಹಾಗೂ ಸೇವಾ ವಿತರಣೆ ವ್ಯವಸ್ಥೆಗಳ ಮೂಲಕ ಸಂಯೋಜಿಸಲಾಗುವುದು. ಇದೇ ಸಮಯದಲ್ಲಿ ಸಮುದಾಯ ಮಟ್ಟದಲ್ಲಿ ಸ್ಥಳೀಯ ಅಭಿವೃದ್ಧಿ ಯೋಜನೆಗಳು ಹಾಗೂ ಅದಕ್ಕೆ ಪೂರಕವಾದ ಆಯವ್ಯಯಗಳೊಂದಿಗೆ ಮಕ್ಕಳ ಕಲ್ಯಾಣ ಹಾಗೂ ಸಂರಕ್ಷಣೆಯ ವಿಷಯಗಳಿಗೆ ಸಮಾನ ಒತ್ತನ್ನು ನೀಡಲಾಗುವುದು. ಈ ಪ್ರಕಾರವಾಗಿ, ಸಮುದಾಯದಲ್ಲಿ ಬಲಿಷ್ಠ ಮಕ್ಕಳ–ಸ್ನೇಹಿ ಪರಿಸರ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ವಕಾಲತ್ತು, ಅರಿವು ಮೂಡಿಸುವಿಕೆ, ಸಾಮರ್ಥ್ಯ ಅಭಿವೃದ್ಧಿ ಹಾಗೂ ತಡೆಗಟ್ಟುವ ಕ್ರಮಗಳಿಗೆ ಸಂಬಂಧಪಟ್ಟಂತೆ ಸಾಂಸ್ಥಿಕ ಚೌಕಟ್ಟಿನಡಿ ಬರುವ ಸಮಿತಿಗಳು ಶಾಸನಬದ್ಧ ಹಾಗೂ ಸೇವಾ ವಿತರಣಾ ರಚನೆಗಳಿಗೆ ಪೂರಕವಾಗಿರುವಂತೆ ನೋಡುವುದು.

## ಈ ಧ್ಯೇಯದ ಗುರಿಗಳು:

1. ಕಷ್ಟದ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಬೆಂಬಲ ಹಾಗೂ ಸುಸ್ಥಿರತೆ.
2. ವಿವಿಧ ಹಿನ್ನೆಲೆಗಳನ್ನು ಹೊಂದಿರುವ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಸಂದರ್ಭ–ಆಧಾರಿತ ಪರಿಹಾರಗಳ ಅಭಿವೃದ್ಧಿ.
3. ನವೀನ ಪರಿಹಾರಗಳನ್ನು ಉತ್ತೇಜಿಸಲು ಅವಕಾಶ ಒದಗಿಸುವುದು
4. ಸಹಭಾಗಿತ್ವ ಕ್ರಮವನ್ನು ಭದ್ರಪಡಿಸುವುದು

## 1.3 ಉದ್ದೇಶಗಳು

## ಮಿಷನ್ ವಾತ್ಸಲ್ಯದ ಮುಖ್ಯ ಉದ್ದೇಶಗಳು:

1. ಮಿಷನ್‌ನಡಿ ಕೈಗೊಳ್ಳುವ ಎಲ್ಲಾ ಚಟುವಟಿಕೆಗಳು ಹಾಗೂ ಕ್ರಮಗಳ ಸಂದರ್ಭಗಳಲ್ಲಿ **ಮಗು ಕೇಂದ್ರಿತವಾಗಿಟ್ಟುಕೊಂಡೇ** ಆಡಳಿತದ ಯೋಜನೆಯಲ್ಲಿ **ಮಕ್ಕಳಿಗೆ ಆದ್ಯತೆ** ನೀಡಲಾಗುವುದು.
2. ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಾಗ ಮಕ್ಕಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಳ್ಳುವುದು ಹಾಗೂ **ಕುಟುಂಬಗಳ ಬೆಂಬಲಕ್ಕಾಗಿ ಬಲಿಷ್ಠ ಸಾಮಾಜಿಕ ಸುರಕ್ಷತೆಯೊಂದಿಗೆ ಮಕ್ಕಳು ಸಂತೋಷಕರವಾದ ಕೌಟುಂಬಿಕ ಪರಿಸರದಲ್ಲಿ ಬೆಳೆಯುವ ಹಕ್ಕನ್ನು ಖಾತ್ರಿಪಡಿಸಲು ದೃಢೀಕೃತ ಕ್ರಿಯೆ.**
3. ಮಕ್ಕಳ ಬದುಕುವ, ಅಭಿವೃದ್ಧಿ ಹೊಂದುವ, ರಕ್ಷಣೆ ಪಡೆಯುವ ಹಾಗೂ ಭಾಗವಹಿಸುವಿಕೆಯ ಹಕ್ಕುಗಳನ್ನು ಖಾತ್ರಿಪಡಿಸುವುದು.
4. ರಾಷ್ಟ್ರ, ಪ್ರಾದೇಶಿಕ, ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ **ಅಗತ್ಯ ಸೇವೆಗಳು ಹಾಗೂ ತುರ್ತು ಪರಿಸ್ಥಿತಿ ನಿರ್ವಹಣೆ ತಲುಪುವಿಕೆ, ಕುಟುಂಬ ಹಾಗೂ ಸಮುದಾಯದೊಳಗೆ ಸಾಂಸ್ಥಿಕೇತರ ಪೋಷಣೆ, ಸಾಂಸ್ಥಿಕ ಪೋಷಣೆ ಆಪ್ತಸಮಾಲೋಚನೆ ಹಾಗೂ ಬೆಂಬಲ ಸೇವೆಗಳ ಸ್ಥಾಪನೆ.**

5. ಎಲ್ಲಾ ಹಂತಗಳಲ್ಲಿಯೂ **ಸೂಕ್ತ ಅಂತರ್-ಕ್ಷೇತ್ರೀಯ ಪ್ರತಿಕ್ರಿಯೆಯನ್ನು** ಖಾತ್ರಿಪಡಿಸುವುದು, ಮಕ್ಕಳಿಗೆ ತಡೆರಹಿತ ಸೇವಾ ಹಂಚಿಕೆಗಾಗಿ ಸಂಯೋಜಿತ ಪ್ರಯತ್ನಗಳನ್ನು ಉತ್ತೇಜಿಸಲು **ಎಲ್ಲಾ ಸಹಭಾಗಿತ್ವ ವ್ಯವಸ್ಥೆಗಳ ಜೊತೆ ಸಂಯೋಜನೆ ಹಾಗೂ ಸಂಪರ್ಕವನ್ನು ಖಾತ್ರಿಪಡಿಸುವುದು.**
6. **ಕುಟುಂಬ ಹಾಗೂ ಸಮುದಾಯ ಮಟ್ಟದಲ್ಲಿ ಮಕ್ಕಳ ಸಂರಕ್ಷಣೆಯನ್ನು ಬಲಪಡಿಸುವುದು,** ಮಕ್ಕಳ ಮೇಲೆ ಪರಿಣಾಮ ಬೀರುವಂತಹ **ಗಂಡಾಂತರಗಳು ಹಾಗೂ ಅಪಾಯಗಳನ್ನು ಗುರುತಿಸಲು ಕುಟುಂಬಗಳು ಹಾಗೂ ಸಮುದಾಯಗಳನ್ನು ಸಜ್ಜುಗೊಳಿಸುವುದು, ಸಂಕಷ್ಟ, ಗಂಡಾಂತರ ಹಾಗೂ ನಿಂದನೆಗೆ ಈಡಾಗುವ ಪರಿಸ್ಥಿತಿಗಳಿಂದ ಮಕ್ಕಳನ್ನು ರಕ್ಷಿಸಲು ತಡೆಗಟ್ಟುವ ಕ್ರಮಗಳನ್ನು ಸೃಷ್ಟಿಸುವುದು ಹಾಗೂ ಪ್ರೋತ್ಸಾಹಿಸುವುದು.**
7. ಮಕ್ಕಳನ್ನು ಬೆಂಬಲಿಸಲು ಕಾನೂನಿನ ಚೌಕಟ್ಟಿನೊಳಗೆ **ಖಾಸಗಿ ಕ್ಷೇತ್ರದ ಪಾಲುದಾರಿಕೆಗಳು ಹಾಗೂ ಮಧ್ಯಸ್ಥಿಕೆಗಳನ್ನು ಪ್ರೋತ್ಸಾಹಿಸುವುದು.**

8. **ಮಕ್ಕಳ ಹಕ್ಕುಗಳು,** ಮಕ್ಕಳ ದುರ್ಬಲತೆಯ ಬಗ್ಗೆ ಹಾಗೂ ಸರ್ಕಾರದಿಂದ ಪ್ರಾಯೋಜಿಸಿರುವ ರಕ್ಷಣೆಯ ಕ್ರಮಗಳ ಕುರಿತು **ಸಾರ್ವಜನಿಕರನ್ನು ಜಾಗೃತರನ್ನಾಗಿಸುವುದು,** ಸಾರ್ವಜನಿಕ ಅರಿವನ್ನು ಹೆಚ್ಚಿಸುವುದು ಹಾಗೂ **ಮಕ್ಕಳ ಹಿತಾಸಕ್ತಿಯನ್ನು ಖಾತ್ರಿಪಡಿಸಲು ಸಮುದಾಯವನ್ನು ಎಲ್ಲಾ ಹಂತಗಳಲ್ಲಿಯೂ ಭಾಗೀಧಾರರನನ್ನಾಗಿ ಮಾಡುವುದು.**
9. ಎಲ್ಲಾ ಹಂತಗಳಲ್ಲಿಯೂ ಕರ್ತವ್ಯ ನಿರ್ವಾಹಕರು ಹಾಗೂ **ಸೇವೆ ಒದಗಿಸುವವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.**
10. ಉತ್ತಮವಾಗಿ ವ್ಯಾಖ್ಯಾನಿಸಬಹುದಾದ ಪರಿಣಾಮ ಹಾಗೂ ಫಲಿತಾಂಶಕ್ಕಾಗಿ ಉದ್ದೇಶ ಆಧಾರಿತ ಮಾನದಂಡಗಳ **ಪ್ರಗತಿಯ ನಿಗಾವಣೆ ಮಾಡುವುದು,** ಹಾಗೂ
11. ಗ್ರಾಮ, ವಾರ್ಡ್ ಹಾಗೂ ನಗರ ಮುನಿಸಿಪಲ್ ವಾರ್ಡ್ ವ್ಯಾಪ್ತಿಯೊಳಗೆ ನಗರ ಕ್ಲಸ್ಟರ್ ಮಟ್ಟದಲ್ಲಿ ಗಮನ ನೀಡಬೇಕಾದ ಅಗತ್ಯವಿರುವ ವಿಷಯಗಳ ಸುಸ್ಥಿರ ಅಂದಾಜಿಸುವಿಕೆ, ಸೂಕ್ತ ಮಧ್ಯಸ್ಥಿಕೆಗಳ ಅನುಷ್ಠಾನ, **ಮಕ್ಕಳ ಸಾಮಾಜಿಕ ಸುರಕ್ಷತೆಗಾಗಿ ಬಲಿಷ್ಠ ಸಾಮಾಜಿಕ ಜಾಲ ಅಭಿವೃದ್ಧಿಪಡಿಸಲು ನಿಯಮಿತವಾದ ನಿಗಾವಣೆ ವಹಿಸಲು ಪಂಚಾಯಿತಿಗಳು ಹಾಗೂ ಮುನಿಸಿಪಲ್ ಸ್ಥಳೀಯ ಸಂಸ್ಥೆಗಳ ಭಾಗವಹಿಸುವಿಕೆ.**

## ಪಾತ್ರ ಮತ್ತು ಜವಾದ್ದಾರಿಗಳು

- **SCPS – 27 ಅಂಶಗಳು.**
- **Director DCP – 12 ಅಂಶಗಳು.**
- **DCPC - 12 ಅಂಶಗಳು.**
- **DCPU – 22 ಅಂಶಗಳು.**
- **Deputy Commissioner – 13 ಅಂಶಗಳು.**
- **DCPO – 9 ಅಂಶಗಳು.**
- **CCIs Condition's – 13 ಅಂಶಗಳು.**
- **PO-IC – 15 ಅಂಶಗಳು.**
- **PO-NIC – 12 ಅಂಶಗಳು.**
- **LPO – 9 ಅಂಶಗಳು.**
- **SAA – Adoption Center – 17 ಅಂಶಗಳು.**
- **CPC at Different Level-12 ಅಂಶಗಳು.**
- **ಸ್ವಚ್ಚತಾ ಕ್ರಿಯಾ ಯೋಜನೆ (CCIs) – 18 ಅಂಶಗಳು.**
- **ಇತರೆ ಉಪಕ್ರಮಗಳು (ಕಾರ್ಯಕ್ರಮಗಳು) – OTHER INITIATIVES – 9**

# STATUS

- Period- 2022-2026, 4 Years
- 2023-24 to 2025-26 Every Year 3% Increase of annual rise
- Detailed Budget Clarity for every layer has given.

# Mission Vatsalya

- Mission Vatsalya Project Approval Board (PAB) ⬇
- Chairpersonship of the Secretary, Ministry of Women and Child Development (MWCD) ⬇
- Central Project Monitoring Unit (CPMU) ⬇
- Mission Directorate headed by Joint Secretary level officer as Mission Director. ⬇
- State Level Monitoring and Review ⬇
- State Child Protection Society (SCPS) ⬇
- State Adoption Resource Agency (SARA) ⬇
- State Child Welfare and Protection Committee ⬇
- District Magistrate and District Child Protection Unit (DCPU) ⬇
- District Child Welfare and Protection Committee (DCWPC) ⬇
- CWC/JJB/SJPU

## ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ನ ಪಾತ್ರ ಹಾಗೂ ಜವಾಬ್ದಾರಿಗಳು:

1) ರಾಜ್ಯದಲ್ಲಿ ಕಾಯ್ದೆಯ ಅನುಷ್ಠಾನ ಹಾಗೂ ಅದರಡಿ ರೂಪಿಸಲಾಗಿರುವ ನಿಯಮಗಳ ಅನುಷ್ಠಾನ.
2) ರಾಜ್ಯದಾದ್ಯಂತ ಮಿಷನ್ ವಾತ್ಸಲ್ಯ ಅನುಷ್ಠಾನದ ಮೇಲ್ವಿಚಾರಣೆ, ಉಸ್ತುವಾರಿ ಹಾಗೂ ಮೌಲ್ಯಮಾಪನ ಮಾಡುವುದು.
3) ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗೆ ಕಾರ್ಯದರ್ಶಿ ಕಾರ್ಯಾಲಯದ ಬೆಂಬಲ ಒದಗಿಸುವುದು.
4) ಮಕ್ಕಳ ಪೋಷಣೆ ಹಾಗೂ ರಕ್ಷಣೆಗೆ ಸಂಬಂಧಪಟ್ಟಂತೆ ಎದುರಾಗುವ ತಡೆಗಳು, ಸಮಸ್ಯೆಗಳು, ಬರುವ ದೂರುಗಳನ್ನು ಬಗೆಹರಿಸುವುದು;
5) ಕಾಯ್ದೆಯಡಿ ಸ್ಥಾಪಿಸಲಾಗುವ ಎಲ್ಲಾ ಸಂಸ್ಥೆಗಳು ಹಾಗೂ ನಿಯಮಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಾತ್ರಿಪಡಿಸುವುದು
6) ರಾಜ್ಯದಲ್ಲಿ ಜಿಲ್ಲೆಗಳ ಸಂಯೋಜನೆಯೊಂದಿಗೆ ಅಗತ್ಯ ಮೌಲ್ಯಮಾಪನವನ್ನು ಖಾತ್ರಿಪಡಿಸುವುದು.
7) ಜಿಲ್ಲೆಗಳ ಅಗತ್ಯ ಮೌಲ್ಯಮಾಪನದ ವರದಿ, ಮಕ್ಕಳ ಸಂಕಷ್ಟದ ಸಮೀಕ್ಷಾ ವರದಿಗಳ ಲಭ್ಯತೆಯ ಪ್ರಕಾರ ಅವುಗಳನ್ನು ಆಧರಿಸಿ ಮಿಷನ್ ವಾತ್ಸಲ್ಯದ ಅನುಷ್ಠಾನಕ್ಕಾಗಿ ರಾಜ್ಯ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧತೆ ಹಾಗೂ ಮಿಷನ್ ವಾತ್ಸಲ್ಯ ರಾಜ್ಯ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಯ ಪರಿಗಣನೆಗಾಗಿ ಹಣಕಾಸಿನ ಪ್ರಸ್ತಾವನೆಗಳ ಸಲ್ಲಿಕೆ.
8) ಯೋಜನೆಯಡಿ ಸಹಾಯಧನ (grant-in-aid) ಬಿಡುಗಡೆಯನ್ನು ಕೋರುವಾಗ ಬಳಕೆ ಪ್ರಮಾಣಪತ್ರ, ವೆಚ್ಚಗಳ ಸ್ಟೇಟ್‌ಮೆಂಟ್, ಭೌತಿಕ ಪ್ರಗತಿ ವರದಿ ಹಾಗೂ ಇತರ ಅಗತ್ಯ ಮಾಹಿತಿಯನ್ನು ಸಲ್ಲಿಸುವುದು.
9) ತ್ರೈಮಾಸಿಕವಾಗಿ ತಪಾಸಣಾ ವರದಿಗಳು, ಕುಂದುಕೊರತೆಗಳು/ ಸಲಹೆಗಳ ವಿವರಗಳು, ಹಾಗೂ ಆರೋಗ್ಯ ತಪಾಸಣೆಗಳು, ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಅನುಸರಣೆ (ನೋಂದಾಯಿತವಾಗಿರುವ ಹಾಗೂ ವಿಲೇವಾರಿ ಆಗಿರುವ ಪ್ರಕರಣಗಳು), ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳ ಅನುಸರಣೆ (ಮರುಸ್ಥಾಪಿತ/ಪುನರ್ವಸತಿ ಕಲ್ಪಿಸಲಾದ), ಉತ್ತಮ ಅಭ್ಯಾಸಗಳು ಹಾಗೂ ಯಶೋಗಾಥೆಗಳನ್ನು ಒದಗಿಸುವುದು.
10) ವಿವಿಧ ಜಿಲ್ಲೆಗಳಲ್ಲಿ ಸಂಸ್ಥೆಗಳ ಕಾರ್ಯನಿರ್ವಹಣೆ ಕುರಿತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಪಡೆದುಕೊಂಡಿರುವ ವರದಿಗಳ ಪರಿಶೀಲನೆ/ಪುನರ್‌ಮನನ ಹಾಗೂ ಅಗತ್ಯವಿರುವ ಸಂದರ್ಭಗಳಲ್ಲಿ ಮಕ್ಕಳ ರಕ್ಷಣೆಗಾಗಿ ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಕಾರ್ಯನಿರ್ವಹಣೆಯ ಉಸ್ತುವಾರಿ ವಹಿಸುವುದು.

11) ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳ ನೋಂದಣಿಯನ್ನು
12) ಫಾಸ್ಟರ್ ಕೇರ್, ಪ್ರಾಯೋಜನೆ ಹಾಗೂ ಪೋಷಕತ್ವಕ್ಕಾಗಿ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು.
13) ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ ಹಾಗೂ ಇತರೆ ಸಾಂಸ್ಥಿಕ ಪೋಷಣಾ ಕೇಂದ್ರಗಳಲ್ಲಿ ಸಂಭವಿಸುವ ಮರಣ ಅಥವಾ ಆತ್ಮಹತ್ಯೆಯ ಪ್ರಕರಣಗಳನ್ನು ತಪಾಸಣೆ ಕೈಗೊಳ್ಳುವುದು, ವರದಿಗಳನ್ನು ಪಡೆಯುವುದು ಹಾಗೂ ಶಿಫಾರಸ್ಸುಗಳನ್ನು ಮಾಡುವುದು.
14) ಅಂತರ್–ಇಲಾಖಾ ಸಂಯೋಜನೆ
15) ಕಾಯ್ದೆ ಹಾಗೂ ನಿಯಮಾವಳಿಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ನಾಗರಿಕ ಸಮಾಜ ಸಂಸ್ಥೆಗಳೊಂದಿಗೆ ನೆಟ್‌ವರ್ಕಿಂಗ್ ಹಾಗೂ ಸಂಯೋಜನೆ ಹೊಂದುವುದು.
16) ಸಾಂಸ್ಥಿಕ ಪೋಷಣೆ ಹಾಗೂ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಯಲ್ಲಿರುವ ಎಲ್ಲಾ ಮಕ್ಕಳ ರಾಜ್ಯ–ಮಟ್ಟದ ದತ್ತಾಂಶ ನಿರ್ವಹಣೆ ಹಾಗೂ ತ್ರೈಮಾಸಿಕ ಅವಧಿಗೆ ಅಪ್‌ಡೇಟ್ ಮಾಡುವುದು.
17) ಎಲ್ಲಾ ಮಕ್ಕಳ ಜನನ ಪ್ರಮಾಣಪತ್ರ, ಆಧಾರ್ ಕಾರ್ಡ್, ಶಾಲಾ ಪ್ರಮಾಣಪತ್ರ, ಲಸಿಕಾ ಪ್ರಮಾಣಪತ್ರಗಳು, ಆರೋಗ್ಯ ತಪಾಸಣಾ ಕಾರ್ಡುಗಳು, ಇತ್ಯಾದಿಗಳಂತಹ ದಾಖಲೆಪತ್ರಗಳು ಸಿಸಿಐನಲ್ಲಿ ಲಭ್ಯವಿರುವುದನ್ನು ಖಾತ್ರಿಪಡಿಸುವುದು.
18) ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರರೋಗ ವಿಜ್ಞಾನಗಳ ಸಂಸ್ಥೆಯು (ನಿಮ್ಹಾನ್ಸ್) ಸಂಕಷ್ಟದ ಪರಿಸ್ಥಿತಿಗಳು ಹಾಗೂ ಯಾತನೆ (ಸಂವಾದ)ಯಲ್ಲಿರುವ ಮಕ್ಕಳಿಗಾಗಿ ಬೆಂಬಲ, ವಕಾಲತ್ತು ಹಾಗೂ ಮಾನಸಿಕ ಆರೋಗ್ಯ ಮಧ್ಯಸ್ಥಿಕೆಗಳ ಸಂಯೋಜನೆಗೊಂದಿಗೆ ಮಕ್ಕಳ ಮನೋವೈಜ್ಞಾನಿಕ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯ ಯೋಗಕ್ಷೇಮ ಒಳಗೊಂಡಂತೆ ರಾಜ್ಯ/ ಕೇಂದ್ರಾಡಳಿತ ಮಟ್ಟದಲ್ಲಿ ಆಪ್ತಸಮಾಲೋಚನಾ ಸಾಮರ್ಥ್ಯ ಹಾಗೂ ಸಂಪನ್ಮೂಲ ವ್ಯಕ್ತಿಗಳ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಹಾಗೂ ಹೆಚ್ಚಿಸುವುದು.

19) ರಾಜ್ಯಮಟ್ಟದಲ್ಲಿರುವ ಮಕ್ಕಳ ಪೋಷಣಾ ಕೇಂದ್ರಗಳು, ವಿಶೇಷ ದತ್ತು ಕೇಂದ್ರಗಳು, ಮುಕ್ತ ಗೃಹಗಳು, ಫಿಟ್ ವ್ಯಕ್ತಿಗಳು ಹಾಗೂ ಫಿಟ್ ಸೌಲಭ್ಯಗಳು, ನೋಂದಾಯಿತ ಪಾಲನಾ ಪೋಷಕರು, ಪ್ರಾಯೋಜಕರು, ಪೋಷಣಾ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳ ಡೇಟಾಬೇಸ್ ಅನ್ನು ನಿರ್ವಹಿಸುವುದು.
20) ವೈದ್ಯಕೀಯ ಹಾಗೂ ಆಪ್ತಸಮಾಲೋಚನಾ ಕೇಂದ್ರಗಳು, ವ್ಯಸನಮುಕ್ತಗೊಳಿಸುವ ಕೇಂದ್ರಗಳು, ಆಸ್ಪತ್ರೆಗಳು, ದೂರ ಶಿಕ್ಷಣ ಶಾಲೆಗಳು, ಶೈಕ್ಷಣಿಕ ಸೌಲಭ್ಯಗಳು, ಶಿಷ್ಯವೃತ್ತಿ ಹಾಗೂ ವೃತ್ತಿಪರ ತರಬೇತಿ ಕಾರ್ಯಕ್ರಮಗಳು ಹಾಗೂ ಕೇಂದ್ರಗಳು, ಪ್ರದರ್ಶನ ಕಲೆಗಳು, ಲಲಿತ ಕಲೆಗಳು ಹಾಗೂ ವಿಶೇಷ ಅಗತ್ಯಗಳಿರುವ ಮಕ್ಕಳಿಗಾಗಿ ಸೌಲಭ್ಯಗಳು ಹಾಗೂ ರಾಜ್ಯಮಟ್ಟದಲ್ಲಿನ ಇತರೆ ಇಂತಹ ಸೌಕರ್ಯಗಳ ಡೇಟಾಬೇಸ್ ನಿರ್ವಹಣೆ.
21) ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಮಕ್ಕಳ ವಿಶೇಷ ಪೊಲೀಸ್ ಘಟಕಗಳು ಹಾಗೂ ಪೊಲೀಸ್ ಠಾಣೆಗಳು, ಒಳಗೊಂಡಂತೆ ರಾಜ್ಯ ಸರ್ಕಾರ ಸ್ಥಾಪಿಸಿರುವಂತಹ ಮಕ್ಕಳ ನ್ಯಾಯ ನಿಧಿಯ ನಿಗಾವಣೆ ಹಾಗೂ ನಿರ್ವಹಣೆ.
22) ಮಕ್ಕಳ ನ್ಯಾಯ ನಿಧಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳಡಿ ಇರುವ ಎಲ್ಲಾ ನಿಧಿಗಳ ಪ್ರತ್ಯೇಕ ಖಾತೆಗಳ ನಿರ್ವಹಣೆ ಹಾಗೂ ಅವುಗಳ ವಾರ್ಷಿಕ ಲೆಕ್ಕಪರಿಶೋಧನೆ ಮಾಡುವುದು.
23) ಕಾಯ್ದೆ ಹಾಗೂ ನಿಯಮಗಳ ವಿವಿಧ ಅಂಶಗಳು, ವಿಶೇಷವಾಗಿ ಹಾಲಿ ಸಾಂಸ್ಥಿಕ ಚೌಕಟ್ಟು, ಪುನರ್ವಸತಿ ಕ್ರಮಗಳು, ದಂಡಗಳು, ಮಕ್ಕಳ ಉತ್ತಮ ರಕ್ಷಣೆಗಾಗಿ ವಿಧಾನಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.
24) ಭಾಗೀದಾರರ ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ಒಳಗೊಂಡಂತೆ ಕಾಯ್ದೆಯ ಅನುಷ್ಠಾನಕ್ಕಾಗಿ ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಹಾಗೂ ಆಯೋಜಿಸುವುದು.
25) ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಸಿವುದು.
26) ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕಾನೂನು ಶಾಲೆಗಳೊಂದಿಗೆ ಸಂಯೋಜನೆ; ಹಾಗೂ
27) ಕಾಯ್ದೆ ಹಾಗೂ ಅವುಗಳ ನಿಯಮಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಇತರೇ ಅಗತ್ಯ ಕಾರ್ಯನಿರ್ವಹಣೆ.

## ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ (ಎಸ್‌ಸಿಪಿಎಸ್) ನಲ್ಲಿ ರಾಜ್ಯ ಮಿಷನ್ ನಿರ್ದೇಶಕರ ಪಾತ್ರಗಳು ಹಾಗೂ ಜವಾಬ್ದಾರಿಗಳು:

1. ಮಿಷನ್ ವಾತ್ಸಲ್ಯ ಅನುಷ್ಠಾನ ಹಾಗೂ ಸಂಬಂಧಿತ ನಿಧಿ ಹಂಚಿಕೆ ಮತ್ತು ಮೇಲ್ವಿಚಾರಣೆ ಹಾಗೂ ಉಸ್ತುವಾರಿ ನಿರ್ವಹಣೆ.
2. ಯೋಜನೆಯಡಿ ಅಗತ್ಯ ಸಿಬ್ಬಂದಿಗಳ ನಿಯೋಜನೆಯನ್ನು ಖಾತ್ರಿಪಡಿಸುವುದು.
3. ಎಲ್ಲಾ ಕರ್ತವ್ಯನಿರ್ವಾಹಕರು ಹಾಗೂ ಭಾಗೀದಾರರ ಸಾಮರ್ಥ್ಯ ಅಭಿವೃದ್ಧಿಯನ್ನು ಹೆಚ್ಚಿಸುವುದು ಹಾಗೂ ಅನುಷ್ಠಾನಗೊಳಿಸುವುದು.
4. ಅಭಿಯಾನದ ವಿವಿಧ ಕಾರ್ಯಕ್ರಮಗಳ ಅಂಶಗಳಡಿ ಜಿಲ್ಲೆಗಳು ಸಲ್ಲಿಸಿರುವ ಪ್ರಸ್ತಾವನೆಗಳು/ಯೋಜನೆಗಳ ಪರಿಶೀಲನೆ ಹಾಗೂ ಕ್ರಮಬದ್ದ ಅನುಷ್ಠಾನಕ್ಕೆ ಅನುಮೋದನೆ ನೀಡುವುದು.
5. ರಾಜ್ಯ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾನೂನುಬದ್ಧ ಹಾಗೂ ಸೇವಾ ವಿತರಣಾ ವ್ಯವಸ್ಥೆಗಳ ಸ್ಥಾಪನೆಯನ್ನು ಖಾತ್ರಿಪಡಿಸುವುದು.
6. ಜಿಲ್ಲೆ/ ನಗರ/ ತಾಲ್ಲೂಕು/ ವಾರ್ಡ್/ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಮಾಜಿಕ ನ್ಯಾಯ/ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಷಯಗಳನ್ನು ನಿರ್ವಹಿಸುತ್ತಿರುವ ಸಮಿತಿಗೆ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಕ್ರಮಗಳ ಕಾರ್ಯನಿರ್ವಹಣಾ ಜವಾಬ್ದಾರಿಯನ್ನು ವಹಿಸಿ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ (ಯುಎಲ್‌ಬಿ) ಗಳಿಂದ ಅಧಿಸೂಚನೆ ಹೊರಡಿಸುವುದನ್ನು ಖಾತ್ರಿಪಡಿಸುವುದು.
7. ಮಿಷನ್ ವಾತ್ಸಲ್ಯ ಅಡಿ ಮಕ್ಕಳ ಕಲ್ಯಾಣ ಹಾಗೂ ಅಭಿವೃದ್ಧಿಗಾಗಿ ಯೋಜನೆ ರೂಪಿಸಲು, ಮಕ್ಕಳ ಉತ್ತಮ ಹಿತದೃಷ್ಟಿ/ಹಿತಾಸಕ್ತಿಗಾಗಿ ಮತ್ತು ಸಹಭಾಗಿತ್ವ ಕ್ರಿಯೆಯ ಮೂಲಕ ಸಮಯಕ್ಕೆ ಸರಿಯಾಗಿ ಯೋಜನೆಯನ್ನು ಅನುಷ್ಠಾನೊಗಳಿಸಲು ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಭಾಗೀದಾರರೊಂದಿಗೆ ಸಂಯೋಜನೆ ಹೊಂದುವುದು.

8. ರಾಜ್ಯದಲ್ಲಿನ ಮಕ್ಕಳ ಪುನರ್‌ಸ್ಥಾಪನೆ, ಪುನರ್ವಸತಿ ಹಾಗೂ ಮುಖ್ಯವಾಹಿನಿಗಾಗಿ ಸುಗಮಗಾರಿಕೆಯನ್ನು ಒದಗಿಸುವುದು
9. ಮಿಷನ್ ವಾತ್ಸಲ್ಯ ಅಡಿ ಬೆಂಬಲ ಒದಗಿಸಿರುವ ಮಕ್ಕಳು 18 ವರ್ಷ ವಯಸ್ಸು ತುಂಬಿದ ನಂತರ ಸ್ವಸಮರ್ಥರಾಗುವುದನ್ನು ಖಾತ್ರಿಪಡಿಸುವುದು ಹಾಗೂ ಅವರ ಉನ್ನತ ಶಿಕ್ಷಣ, ವೃತ್ತಿಪರ ಕೋರ್ಸ್‌ಗಳು ಅಥವಾ ಸಣ್ಣ ವ್ಯಾಪಾರಗಳನ್ನು ಆರಂಭಿಸಲು ವಿದ್ಯರ್ಥಿವೇತನ ಅಥವಾ ಸಾಲಗಳು ದೊರಕುವ ವ್ಯವಸ್ಥೆ ಮಾಡುವುದು.
10. ಮಕ್ಕಳಿಗೆ ಹಣಕಾಸಿನ ಬೆಂಬಲ ಒದಗಿಸಲು ಮಕ್ಕಳ ನ್ಯಾಯ ನಿಧಿ ನಿರ್ವಹಣೆ ಮತ್ತು ಈ ಖಾತೆಗೆ ಬರುವಂತಹ ಯಾವುದಾದರೂ ದಾನ ಕೊಡುಗೆಗಳಿಗೆ ಆದಾಯ ತೆರಿಗೆ ವಿನಾಯಿತಿ ಪಡೆಯಲು ಅಗತ್ಯ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ಸೂಕ್ತ ಸಹಕಾರ ಒದಗಿಸುವುದು.
11. ಮಕ್ಕಳಿಗಾಗಿ ಹಾಗೂ ಮಕ್ಕಳಿಗೆ ಸಂಬಂಧಿಸಿದ ಸಂಪನ್ಮೂಲಗಳನ್ನು ವೃದ್ಧಿಗೊಳಿಸಲು ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ಬೆಂಬಲವನ್ನು ಕ್ರೋಢೀಕರಿಸುವುದು.
12. ರಾಜ್ಯ ಅಭಿಯಾನ/ಮಿಷನ್ ನಿರ್ದೇಶಕರು ಈ ಯೋಜನೆಯ ಕುಂದುಕೊರತೆಗಳ

## ಡಿಸಿಪಿಯು ಪಾತ್ರಗಳು ಹಾಗೂ ಜವಾಬ್ದಾರಿಗಳು –

## Roles and Responsibilities of DCPU:

1) ಡಿಸಿಪಿಯು, ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ನಿಯಮಾವಳಿಗಳ ಪ್ರಕಾರ ಕಾರ್ಯನಿರ್ವಹಿಸಬೇಕಾಗುತ್ತದೆ.
2) ಡಿಸಿಪಿಯು, ಎಲ್ಲಾ ಮಕ್ಕಳ ರಕ್ಷಣಾ ಕಾನೂನುಗಳು, ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಮಿಷನ್/ಅಭಿಯಾನದಡಿ ನಿಗಧಿಪಡಿಸಲಾಗಿರುವ ಮಕ್ಕಳ ರಕ್ಷಣಾ ಗುರಿಗಳನ್ನು ಸಾಧಿಸಲು ಕಾರ್ಯೋನ್ಮುಖವಾಗಿರುತ್ತದೆ.
3) ಜಿಲ್ಲಾ ಮಟ್ಟದಲ್ಲಿ ಎಲ್ಲಾ ಮಕ್ಕಳ ಹಕ್ಕುಗಳು ಹಾಗೂ ರಕ್ಷಣಾ ಚಟುವಟಿಕೆಗಳ ಸಂಯೋಜನೆ ಹಾಗೂ ಅನುಷ್ಠಾನ.
4) ಜಿಲ್ಲಾ ಮಟ್ಟದಲ್ಲಿ ಮಿಷನ್/ಅಭಿಯಾನದ ಅನುಷ್ಠಾನಕ್ಕಾಗಿ ಆಡಳಿತಾತ್ಮಕ ಬೆಂಬಲ ಒದಗಿಸುವುದು ಹಾಗೂ ಸಚಿವಾಲಯದಂತೆ ಕಾರ್ಯನಿರ್ವಹಿಸುವುದು.
5) ತಾಲ್ಲೂಕು/ ಗ್ರಾಮ ಪಂಚಾಯಿತಿ/ ವಾರ್ಡ್ ಮಟ್ಟದ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳು, ಪೋಷಣ್ 2.0 ಕಾರ್ಯನಿರ್ವಾಹಕರು, ವಿಶೇಷ ದತ್ತು ಕೇಂದ್ರಗಳು (ಎಸ್ಎಎ), ಮಕ್ಕಳ ರಕ್ಷಣಾ ವಿಷಯಗಳಲ್ಲಿ ತೊಡಗಿಸಿಕೊಂಡಿರುವ ಎನ್‌ಜಿಒಗಳು ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ಪರಿಣಾಮಕಾರಿ ಸಂಪರ್ಕಜಾಲ ಸ್ಥಾಪನೆ ಹಾಗೂ ಸಂಪರ್ಕಗಳನ್ನು ಹೊಂದುವ ಮೂಲಕ ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಮಕ್ಕಳು ಹಾಗೂ ಅಪಾಯದಲ್ಲಿರುವ ಕುಟುಂಬಗಳನ್ನು ಗುರುತಿಸುವುದು.

6) ಸಂಕಷ್ಟದ ಸನ್ನಿವೇಶಗಳಲ್ಲಿರುವ ಮಕ್ಕಳಿಗೆ ಸಂಬಂಧಿಸಿದಂತೆ, ಸಂಕಷ್ಟಕ್ಕೀಡಾಗುವ ಸಂಭವವಿರುವ ಕ್ಷೇತ್ರಗಳನ್ನು ಗುರುತಿಸಿ ಮ್ಯಾಪಿಂಗ್ ಮಾಡಿ ಯೋಜನೆ ತಯಾರಿಸಿ ಅನುಷ್ಠಾನಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದು.
7) ಮಕ್ಕಳ ಸಂಬಂಧಿತ ಸೇವಾದಾರರು ಹಾಗೂ ಮಕ್ಕಳಿಗಾಗಿ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಜಿಲ್ಲೆಯ ಸಂಪನ್ಮೂಲಗಳ ಸಂಗ್ರಹ/ ಕ್ರೂಢೀಕರಣ ಮಾಡಿ ಮ್ಯಾಪಿಂಗ್ ಮಾಡುವುದು.
8) ಮಿಷನ್ ವಾತ್ಸಲ್ಯ ಯೋಜನೆಯ ಕಾರ್ಯಕ್ರಮದ ಅಂಶಗಳ ಅನುಷ್ಠಾನ ಹಾಗೂ ಅವುಗಳನ್ನು ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದಕ್ಕಾಗಿ ನಂಬಿಕಸ್ಥ ಸ್ವಯಂಸೇವಾ ಸಂಸ್ಥೆಗಳನ್ನು ಗುರುತಿಸುವುದು ಹಾಗೂ ಪರಿಶೀಲಿಸುವುದು.
9) ದತ್ತು ನಿಬಂಧನೆಗಳಲ್ಲಿ ವ್ಯಾಖ್ಯಾನಿಸಿರುವಂತೆ ಪ್ರಾಯೋಜಕತ್ವ, ಪೋಷಣೆ, ಹಾಗೂ ಎಲ್ಲಾ ರೀತಿಯ ದತ್ತು ವಿಷಯಗಳು ಒಳಗೊಂಡಂತೆ ಕುಟುಂಬ ಆಧಾರಿತ ಸಾಂಸ್ಥಿಕೇತರ ಸೇವೆಗಳ ಅನುಷ್ಠಾನಕ್ಕೆ ಅನುಕೂಲ ಒದಗಿಸುವುದು.
10) ಪೋಷಣೆ ಹಾಗೂ ರಕ್ಷಣೆಯ ಅಗತ್ಯವಿರುವ ಪ್ರತಿಯೊಂದು ಮಗುವಿಗೂ ಸಹ **ವೈಯಕ್ತಿಕ ಪೋಷಣಾ ಯೋಜನೆ** ಇರುವುದನ್ನು ಹಾಗೂ ಆ ಯೋಜನೆಯ ನಿಯಮಿತ ಪರಿಷ್ಕರಣೆಯನ್ನು ಖಾತ್ರಿಪಡಿಸುವುದು. ಯೋಜನೆಯ ಅನುಷ್ಠಾನದ ಉಸ್ತುವಾರಿ ವಹಿಸುವುದು.

11) ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಾಗೂ ಅವುಗಳ ಕಾರ್ಯನಿರ್ವಹಣೆಗಳ ಪರಿಣಾಮಕಾರಿ ನಿರ್ವಹಣೆಗಾಗಿ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳ ರಚನೆಯಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಾತ್ರಿಪಡಿಸುವುದು.

12) ಜಿಲ್ಲೆಯ ಮಕ್ಕಳಿಗೆ ಪೋಷಣೆ ಮತ್ತು ರಕ್ಷಣಾ ಸೌಲಭ್ಯಗಳನ್ನು ಒದಗಿಸುವ ಎಲ್ಲಾ ಸಂಸ್ಥೆಗಳು/ ಕೇಂದ್ರಗಳ ಮೇಲ್ವಿಚಾರಣೆ ಹಾಗೂ ಉಸ್ತುವಾರಿ ವಹಿಸುವುದು

13) ಮಕ್ಕಳನ್ನು ಎಲ್ಲಾ ಹಂತಗಳಲ್ಲಿಯೂ ಅವರ ಕುಟುಂಬಗಳೊಂದಿಗೆ ಪುನಃ ಸೇರಿಸುವುದು ಅಥವಾ ಸ್ಥಳೀಯ ದತ್ತು, ಪೋಷಣೆ, ಅಂತರರಾಷ್ಟ್ರೀಯ ದತ್ತು ಹಾಗೂ ಸಾಂಸ್ಥಿಕ ಸೇರ್ಪಡೆಗಾಗಿ ಮಕ್ಕಳ ವರ್ಗಾವಣೆಗೆ ಅನುಕೂಲ ಒದಗಿಸುವುದು.

14) ಮಕ್ಕಳಿಗೆ ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸಲು ಮಕ್ಕಳ ರಕ್ಷಣಾ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ (ಸರಕಾರಿ ಮತ್ತು ಸರಕಾರೇತರ ಸ್ವಯಂಸೇವಾ ಸಂಸ್ಥೆಗಳ) ತರಬೇತಿ ಹಾಗೂ ಸಾಮರ್ಥ್ಯಾಭಿವೃದ್ಧಿ ನಿರ್ಮಾಣ ಮಾಡುವುದು.

15) ಜಿಲ್ಲೆ, ತಾಲ್ಲೂಕು ಹಾಗೂ ಸಮುದಾಯ ಮಟ್ಟಗಳಲ್ಲಿ, ಮಕ್ಕಳ ರಕ್ಷಣಾ ಕಾರ್ಯಕ್ರಮಗಳಲ್ಲಿ ಯುವಜನರ ಸ್ವಯಂಪ್ರೇರಿತ ಭಾಗವಹಿಸುವಿಕೆಯನ್ನು ಖಾತ್ರಿಪಡಿಸುವುದು.

16) ಮಕ್ಕಳ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಕುರಿತಂತೆ ಅಂತರ್–ಕ್ಷೇತ್ರೀಯ ಸಂಪರ್ಕಗಳನ್ನು ನಿರ್ಮಾಣ ಮಾಡಲು ಹಾಗೂ ಮಕ್ಕಳ ಕಲ್ಯಾಣಕ್ಕಾಗಿ ಕೇಂದ್ರ/ರಾಜ್ಯ/ ಇತರೆ ಯಾವುದಾದರೂ ಯೋಜನೆಗಳಡಿ ಮಕ್ಕಳಿಗೆ ಲಾಭಗಳು ದೊರಕುವುದನ್ನು ಖಾತ್ರಿಪಡಿಸಲು ಇತರೆ ಇಲಾಖೆಗಳು (ಮಿಷನ್ ವಾತ್ಸಲ್ಯದಡಿ ಒಮ್ಮುಖ ಮೇಟ್ರಿಕ್ಸ್‌ನಲ್ಲಿ ನಮೂದಿಸಿರುವುದನ್ನೂ ಒಳಗೊಂಡಂತೆ), ನಾಗರಿಕ ಸಮಾಜ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಇತರೆ ಭಾಗೀದಾರರೊಂದಿಗೆ ಒಮ್ಮುಖತೆಯನ್ನು ಖಾತ್ರಿಪಡಿಸುವುದು ಹಾಗೂ ಸುಗಮಗಾರಿಕೆ ಒದಗಿಸುವುದು

17) ಮಕ್ಕಳ ಮೇಲೆ ಪರಿಣಾಮ ಬಿರುವ ಸಾಂದರ್ಭಿಕ ತೊಂದರೆಗಳು ಹಾಗೂ ಸಂಭವನೀಯ ಪರಿಹಾರಗಳ ವಿಶ್ಲೇಷಣೆಗಾಗಿ ಜಿಲ್ಲಾ ಮಟ್ಟದಲ್ಲಿ ಅಗತ್ಯ–ಆಧಾರಿತ ಸಂಶೋಧನೆ/ಅಧ್ಯಯನ ಹಾಗೂ ದಾಖಲೆಪತ್ರಗಳ ನಿರ್ವಹಣೆ ಚಟುವಟಿಕೆಗಳನ್ನು ಕೈಗೊಳ್ಳುವುದು.

18) ಜಿಲ್ಲೆಯಲ್ಲಿ ಮಿಷನ್ ವಾತ್ಸಲ್ಯದ ಅನುಷ್ಠಾನದ ಮೇಲ್ವಿಚಾರಣೆ, ಉಸ್ತುವಾರಿ/ನಿಗಾವಣೆ ಹಾಗೂ ಮೌಲ್ಯಮಾಪನದ ನಿರ್ವಹಣೆ.

19) ಮಕ್ಕಳ ಪುನಃಸ್ಥಾಪನೆ ಹಾಗೂ ಪುನರ್ವಸತಿ ಹಾಗೂ ಪಿಯರ್ ಕಲಿಕೆಗಾಗಿ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ಡಿಸಿಪಿಯುಗಳು ಹಾಗೂ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಗಳೊಂದಿಗೆ ಕಾರ್ಯನಿರ್ವಹಣಾ ಸಂಪರ್ಕ ಸ್ಥಾಪಿಸುವುದು

20) ರಾಜ್ಯ/ಕೇಂದ್ರಾಡಳಿತ ಪ್ರದೇಶ ಅಥವಾ ಕೇಂದ್ರ ಸರ್ಕಾರದ ಕೋರಿಕೆಯಂತೆ/ ನಿಗದಿಪಡಿಸಿದಂತೆ ಮಾಹಿತಿ ಹಾಗೂ ಕಾಲಕಾಲಕ್ಕೆ ವರದಿಗಳನ್ನು ಒದಗಿಸುವುದು. ಮಿಷನ್ ವಾತ್ಸಲ್ಯ ಪೋರ್ಟಲ್‌ನಲ್ಲಿ ಮಾಸಿಕ ವರದಿಗಳನ್ನು ಅಪ್‌ಲೋಡ್ ಮಾಡುವುದು.

21) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಎಲ್ಲಾ ಭಾಗೀದಾರ ಇಲಾಖೆಗಳ/ಅಧಿಕಾರಿಗಳ ಮಾಸಿಕ ಸಭೆಗಳನ್ನು ಆಯೋಜಿಸುವುದು.

22) ಮಿಷನ್ ವಾತ್ಸಲ್ಯದ ಗುರಿಗಳು ಹಾಗೂ ಉದ್ದೇಶಗಳ ಸಾಧನೆಗಾಗಿ ಅಗತ್ಯವಿರುವ ಇತರೆ ಯಾವುದಾದರೂ ಚಟುವಟಿಕೆ.

# 5. ಸಹಭಾಗಿತ್ವ - CONERGENCE

(ಎ) ಅಂತರಿಕ ಸಚಿವಾಲಯ ಸಹಭಾಗಿತ್ವ - Intra Ministry Convergence:

- ಮಿಷನ್ ಸಕ್ಷಮ್ – **Mission Saksham**
- ಮಿಷನ್ ಶಕ್ತಿ – **Mission Shakti**
- ಸಿಎಆರ್‌ಎ – **CARA**

## (ಬಿ) ಅಂತರ್ ಸಚಿವಾಲಯ ಸಹಭಾಗಿತ್ವ - Inter Ministry Convergence:

1. ಸಮಾಜ ಕಲ್ಯಾಣ ಇಲಾಖೆ)
2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
3. ಕೌಶಲ್ಯ ಅಭಿವೃದ್ಧಿ ಹಾಗೂ ಉದ್ಯಮಶೀಲತಾ ಸಚಿವಾಲಯ.
4. ಶಿಕ್ಷಣ ಸಚಿವಾಲಯದ ಶಾಲಾ ಶಿಕ್ಷಣ ಹಾಗೂ ಸಾಕ್ಷರತೆ ಇಲಾಖೆ.
5. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ. (ಮಕ್ಕಳ ಆರೋಗ್ಯ ವಿಭಾಗ)
6. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ.
7. ಆರ್ಥಿಕ ಮತ್ತು ಸಾಂಖ್ಯಿಕ ಸಚಿವಾಲಯ ಹಾಗೂ ಕಾರ್ಯಕ್ರಮ ಅನುಷ್ಠಾನ.
8. ಗೃಹ ವ್ಯವಹಾರಗಳ ಸಚಿವಾಲಯ
9. ವಿದೇಶಾಂಗ ವ್ಯವಹಾರಗಳ ಸಚಿವಾಲಯ.
10. ನ್ಯಾಯಾಂಗ ಇಲಾಖೆ, ಕಾನೂನು ಮತ್ತು ನ್ಯಾಯಾಂಗ ಸಚಿವಾಲಯ.
11. ಆಯುಷ್ ಸಚಿವಾಲಯ.
12. ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ.
13. ಪಂಚಾಯಿತಿ ರಾಜ್ ಸಚಿವಾಲಯ.
14. ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ.
15. ಪೊಲೀಸ್ ಸಂಶೋಧನೆ ಹಾಗೂ ಅಭಿವೃದ್ಧಿ ಬ್ಯೂರೊ (ಬಿಪಿಆರ್&ಡಿ– **BPR&D-Bureau of Police Research and Development)**, ಗೃಹ ವ್ಯವಹಾರಗಳ ಸಚಿವಾಲಯ.
16. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಎನ್‌ಎಎಲ್‌ಎಸ್– **NALSA, SLSA,DLSA, TLSA**), ಕಾನೂನು ಸಚಿವಾಲಯ.

(ಸಿ) ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಸಹಭಾಗಿತ್ವ/ ಒಮ್ಮುಖತೆ/ಸಹಯೋಗ:
**Convergence with States/Uts:**

- ಡಿಡಬ್ಲ್ಯೂಸಿಡಿ– DWCD ಇಲಾಖೆ ಅಥವಾ J¸ïeÉE- DSJE- Department Of Social Justice ಇಲಾಖೆ.
- ರಾಜ್ಯ ಪೊಲೀಸ್.
- ರಾಜ್ಯ ಹಣಕಾಸು.

(ಡಿ) ಕಾರ್ಪೊರೇಟ್ ಸಂಸ್ಥೆಗಳೊಂದಿಗೆ ಸಹಭಾಗಿತ್ವ/ಒಮ್ಮುಖತೆ: **Convergence with Corporate Organisations:**

- ಖಾಸಗಿ ಸಂಘ ಸಂಸ್ಥೆಗಳು.
- ಸಾರ್ವಜನಿಕ ವಲಯದ ಸಂಸ್ಥೆಗಳು.

## 6. ಇತರೆ ಉಪಕ್ರಮಗಳು (ಕಾರ್ಯಕ್ರಮಗಳು) –OTHER INITIATIVES

**i.** ಸಂವಾದ್– **SAMVAD:**

**ii.** ಮಕ್ಕಳ ಪೋಷಣಾ ಸಂಸ್ಥೆಗಳ ಶ್ರೇಣೀಕರಣ – **Grading of Child Care Institutions:**

**iii.** ರಾಷ್ಟ್ರೀಯ ಸಾರ್ವಜನಿಕ ಸಹಕಾರ ಹಾಗೂ ಮಕ್ಕಳ ಅಭಿವೃದ್ಧಿಯ ರಾಷ್ಟ್ರೀಯ ಮಕ್ಕಳ ಸಂಪನ್ಮೂಲ ಕೇಂದ್ರಕ್ಕೆ ಬೆಂಬಲ – **Supporting National Child Resource Centre at National Institute of Public cooperation and Child Development:**

**Iv.** ರಾಷ್ಟ್ರೀಯ ಮಕ್ಕಳ ಸಮೀಕ್ಷೆ ಹಾಗೂ ಮಕ್ಕಳ ಅಭಿವೃದ್ಧಿ ಸೂಚ್ಯಂಕ – **Conducting a National Survey and Development of Child Index:**

**V.** ಮಕ್ಕಳ ಸಂರಕ್ಷಣಾ ಪ್ರಶಸ್ತಿಗಳು – **Child Protection Awards:**

**Vi.** ಸಂಶೋಧನೆ ಹಾಗೂ ದಾಖಲೆ ನಿರ್ವಹಣೆ – **Research and Documentation:**

**Vii.** ವಾರ್ತಾಪತ್ರಗಳ ಪ್ರಕಟಣೆ – **Publication of Newsletters:**

**Viii.** ಸ್ವಯಂಸೇವಕರನ್ನು ತೊಡಗಿಸಿಕೊಳ್ಳುವುದು – **Engaging Volunteers:**

**Ix.** ಮಕ್ಕಳ ಆಯವ್ಯಯ – **Child Budgeting:**

## Roles and Responsibilities of Duty holders in DCPU:

### 1) ಜಿಲ್ಲಾಧಿಕಾರಿಗಳು/ ಜಿಲ್ಲಾ ದಂಡಾಧಿಕಾರಿಗಳು (ಡಿಸಿ/ಡಿಎಂ) – District Magistrate (DM/DC):

1. ಜಿಲ್ಲಾಧಿಕಾರಿಗಳು ಕಾಲಕಾಲಕ್ಕೆ ತಿದ್ದುಪಡಿ ಆಗಿರುವ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ನಿಯಮಗಳನ್ವಯ ಒದಗಿಸಿರುವ ಕಾರ್ಯನಿರ್ವಹಣೆಗಳನ್ನು ನಿರ್ವಹಿಸುವುದು.
2. ಜಿಲ್ಲೆಯಲ್ಲಿ ಆಯಾ ಕಾಲಮಿತಿಯಲ್ಲಿಯೇ ಯೋಜನೆಯನ್ನು ಅನುಷ್ಠಾನಗೊಳಿಸಬೇಕು.
3. ಜಿಲ್ಲಾಧಿಕಾರಿಗಳು ವಾರ್ಷಿಕವಾಗಿ ವಿಶೇಷವಾಗಿ ಸಂಕಷ್ಟದಲ್ಲಿರುವ ಮಕ್ಕಳಿಗೆ ಸಂಬಂಧಪಟ್ಟಂತೆ ಅಗತ್ಯ ಯೋಜನೆ ಹಾಗೂ ಸಂಪನ್ಮೂಲ ಮ್ಯಾಪಿಂಗ್ ಮಾಡಿಸಿ ಅದರ ಅನುಷ್ಠಾನವನ್ನು ಖಾತ್ರಿಪಡಿಸುವುದು.
4. ಮಕ್ಕಳ ಹಕ್ಕನ್ನು ಮಕ್ಕಳು ಅನುಭವಿಸುವಂತೆ ಆಗಲು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಇತರ ಎಲ್ಲಾ ಇಲಾಖೆಗಳೊ ಒಳಗೊಂಡಂತೆ ಎಲ್ಲಾ ಭಾಗೀದಾರರೊಂದಿಗೆ ಸಮಾಲೋಚಿಸಿ ಜಿಲ್ಲಾ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಿ, ಅಭಿವೃದ್ಧಿಪಡಿಸಿ ಅನುಷ್ಠಾನಕ್ಕೆ ತರುವುದು.
5. ಮಕ್ಕಳ ಪುನಃಸ್ಥಾಪನೆ, ಪುನರ್ವಸತಿ ಹಾಗೂ ಸಾಮಾಜಿಕ ಪುನರ್ ಸಂಯೋಜನೆಗಾಗಿ ರಾಜ್ಯ ಸರ್ಕಾರ, ಇತರೆ ಜಿಲ್ಲೆಗಳು ಹಾಗೂ ಕೇಂದ್ರಗಳೊಂದಿಗೆ ಸೂಕ್ತ ಕ್ರಮವಹಿಸುವುದು.

6. ಸೂಕ್ತ ಸಹಭಾಗಿತ್ವ ಯೋಜನೆ ಹಾಗೂ ಕ್ರಮದ ಮೂಲಕ ಎಲ್ಲಾ ಯೋಜನೆಗಳು ಮಕ್ಕಳಿಗೆ ತಲುಪುವುದನ್ನು ಖಾತ್ರಿಪಡಿಸಲು ವಿಶೇಷ ಪ್ರಯತ್ನಗಳೊಂದಿಗೆ ಸರ್ಕರದ ಇತರೆ ಹಾಲಿ ಯೋಜನೆಗಳಡಿ ಮಕ್ಕಳಿಗಾಗಿ ಇರುವ ಎಲ್ಲಾ ಸೌಲಭ್ಯಗಳನ್ನು ಹಾಗೂ ವಿಶೇಷ ಹಕ್ಕುಗಳು ಮಕ್ಕಳಿಗೆ ತಲುಪುವುದನ್ನು ಖಾತ್ರಿಪಡಿಸುವುದು.
7. ಅನುಪಾಲನಾ ಕೇಂದ್ರಗಳ ಧಿಡೀರ್ ತಪಾಸಣೆಗಳನ್ನು ಕೈಗೊಳ್ಳುವುದು.
8. ಸೂಕ್ತ ಸಮಯದಲ್ಲಿ ಮಕ್ಕಳಿಗೆ ಪೂರಕ ಶಿಕ್ಷಣ, ವೃತ್ತಿ ಕೌಶಲ್ಯ. ಜೀವನ ಕೌಶಲ್ಯ, ಆಪ್ತಸಮಾಲೋಚನೆ ಸೌಲಭ್ಯ, ವೃತ್ತಿಪರ ತರಬೇತಿಗಳು ತಲುಪುವುದನ್ನು ಖಾತ್ರಿಪಡಿಸಿ, ಅನುಪಾಲನೆಯನ್ನು ಮಾಡುವುದು.
9. ಈ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ಸೂಕ್ತ ಪ್ರಾಯೋಜಕತ್ವ, ವಿದ್ಯಾರ್ಥಿವೇತನಗಳು, ಸಾಂಸ್ಥೀಕರಣ, ಶಿಕ್ಷಣ ಪಡೆಯಲು ಸಾಲ ಸೌಲಭ್ಯಗಳನ್ನು ಒದಗಿಸುವುದು, ಇತ್ಯಾದಿಗಾಗಿ ಸಾರ್ವಜನಿಕ ಹಾಗೂ ಖಾಸಗಿ ವಲಯಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ಇತರೆ ಭಾಗೀದಾರರ ಭಾಗವಹಿಸುವಿಕೆ ಹಾಗೂ ಕೊಡುಗೆಗಳನ್ನು ಪ್ರೋತ್ಸಾಹಿಸುವುದು.

**10. ಜಿಲ್ಲೆಯಲ್ಲಿ ಮಕ್ಕಳಿಗೆ ಸಂಬಂಧಪಟ್ಟ ಈ ಕೆಳಕಂಡ ವಿವಿಧ ವಿಷಯಗಳ ಕುರಿತು ಚರ್ಚಿಸಲು ಡಿಸಿಪಿಯು, ಸಿಡಿಪಿಒ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಇಲಾಖೆ, ಪಂಚಾಯತ್‌ರಾಜ್ ಇಲಾಖೆ, ಡಿಎಲ್‌ಎಸ್‌ಎ ಹಾಗೂ ಇತರೆ ಭಾಗೀದಾರರೊಂದಿಗೆ ಮಾಸಿಕ ಸಭೆಗಳನ್ನು ನಡೆಸುವುದು:**

a. ಮಕ್ಕಳ ಅಗತ್ಯಗಳು ಹಾಗೂ ಸಂಪನ್ಮೂಲಗಳ ಲಭ್ಯತೆಯನ್ನು ಕಾಲಕಾಲಕ್ಕೆ ಖಾತ್ರಿಪಡಿಸಿಕೊಳ್ಳುವುದು.
b. ಆರೋಗ್ಯ ಶಿಕ್ಷಣ ಒಳಗೊಂಡಂತೆ ಲಸಿಕಾಕರಣ ಹಾಗೂ ಇತರೆ ಆರೋಗ್ಯ ಸೇವೆಗಳು
c. ಮಕ್ಕಳ ವಿರುದ್ಧ ಅಪರಾಧ ಹಾಗೂ ಹಿಂಸೆಯ ಪ್ರವೃತ್ತಿ ಹಾಗೂ ಮಕ್ಕಳ ವಿರುದ್ಧದ ಅಪರಾಧಗಳ ಪ್ರಕರಣಗಳಲ್ಲಿ ಅಪರಾಧಿಗಳ ಬಂಧನಕ್ಕಾಗಿ ಕೈಗೊಂಡಿರುವ ಕ್ರಮಗಳು.
d. ಮಕ್ಕಳಿಗಾಗಿ ಗುಣಮಟ್ಟ ಅನುಪಾಲನಾ ಸೇವೆಗಳ ಲಭ್ಯತೆ.
e. ಪ್ರಾಯೋಜಕತ್ವ ಹಾಗೂ ಫಾಸ್ಟರ್ ಕೇರ್‌ನ ಸ್ಥಿತಿಗತಿ ಹಾಗೂ ಅನುಪಾಲನೆಗಾಗಿ ವ್ಯವಸ್ಥೆಗಳು.
f. ಜಿಲ್ಲೆಗಳಲ್ಲಿ ಹಾಗೂ ಸಿಸಿಐಗಳಲ್ಲಿ ತಪ್ಪಿಸಿಕೊಂಡಿರುವ, ಓಡಿಹೋದ, ಅಥವಾ ಮೃತಪಟ್ಟಿರುವ ಮಕ್ಕಳ ವರದಿಗಾರಿಕೆ.
g. ಮಕ್ಕಳ ಪುನಃಸ್ಥಾಪನೆಗಾಗಿ ಸಂಯೋಜನಾ ವ್ಯವಸ್ಥೆಗಳು.
h. ಮಕ್ಕಳಿಗೆ ಸಂಬಂಧಪಟ್ಟಂತೆ ಮತ್ಯಾವುದಾದರೂ ಅಗತ್ಯ ವಿಷಯಗಳು.

11. ಅನುಪಾಲನಾ ಸಂಸ್ಥೆಗಳು, ಪೊಲೀಸ್ ಠಾಣೆಗಳು ಹಾಗೂ ಹೆಚ್ಚಿನ ಸಂಖ್ಯೆಯ ಮಕ್ಕಳಿರುವ ಇತರೆ ಸ್ಥಳಗಳಲ್ಲಿ ಸಲಹಾ ಪೆಟ್ಟಿಗೆ ಇರಿಸುವಿಕೆಯನ್ನು ಖಾತ್ರಿಪಡಿಸುವುದು, ಹಾಗೂ ಮಕ್ಕಳು ನೀಡಿರುವ ದೂರುಗಳು ಹಾಗೂ ಸಲಹೆಗಳನ್ನು ಅವಲೋಕಿಸಿ, ಸಂಯೋಜಿಸಿ ಸೂಕ್ತ ಕ್ರಮ ಕೈಗೊಳ್ಳುವುದನ್ನು ಖಾತ್ರಿಪಡಿಸುವುದು.
12. ದತ್ತು ನಿಯಮಾವಳಿಗಳಲ್ಲಿ ಹೇಳಿರುವ ವಿಷಯ ಹಾಗೂ ವ್ಯಾಖ್ಯಾನಿಸಿರುವಂತೆಯೇ ದತ್ತು ಪ್ರಕ್ರಿಯೆ ಆಗುವಂತೆ ಮಾಡುವುದು.
13. ಈ ಯೋಜನೆಗೆ ಜಿಲ್ಲಾಧಿಕಾರಿಗಳು/ದಂಡಾಧಿಕಾರಿಗಳು ಕುಂದುಕೊರತೆಗಳ ಪರಿಹಾರ ಪ್ರಾಧಿಕಾರ ಆಗಿರುತ್ತಾರೆ.

**ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (ಡಿಸಿಪಿಓ)–District Child Protection Officer (DCPO):**

1. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಎಲ್ಲಾ ಸಂಸ್ಥೆಗಳು/ ಕೇಂದ್ರಗಳು/ ಯೋಜನೆಗಳು/ ಕಾರ್ಯಕ್ರಮಗಳು/ ಎನ್‌ಜಿಓಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಹಾಗೂ ಸಾಂಸ್ಥಿಕೇತರ ಪೋಷಣಾ ಕಾರ್ಯಕ್ರಮಗಳ ಸಂಯೋಜನೆ ಒಳಗೊಂಡಂತೆ ಜಿಲ್ಲಾ ಮಟ್ಟದಲ್ಲಿ ಮಿಷನ್/ಅಭಿಯಾನದ ಯೋಜನೆಯ ಹಾಗೂ ಇತರೆ ಎಲ್ಲಾ ಮಕ್ಕಳ ರಕ್ಷಣಾ ಚಟುವಟಿಕೆಗಳ ಅನುಷ್ಠಾನ, ಸಂಯೋಜನೆ ಹಾಗೂ ಮೇಲ್ವಿಚಾರಣೆಯನ್ನು ಮಾಡಬೇಕು.
2. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ವಾರ್ಷಿಕ ಮಕ್ಕಳ ರಕ್ಷಣಾ ಯೋಜನೆ ತಯಾರಿಕೆ/ಅಭಿವೃದ್ಧಿಯಲ್ಲಿ ಜಿಲ್ಲಾಧಿಕಾರಿಗಳಿಗೆ ನೆರವಾಗಬೇಕು ಹಾಗೂ ಜಿಲ್ಲಾಧಿಕಾರಿಗಳಿಗೆ ಅದರ ವರದಿಯನ್ನು ಒಪ್ಪಿಸಿ ಸೂಕ್ತ ಅನುಮತಿಯೊಂದಿಗೆ ಅನುಷ್ಠಾನಕ್ಕೆ ತರಬೇಕು.
3. ಮಕ್ಕಳ ನ್ಯಾಯಕ್ಕೆ ಸಂಬಂಧಪಟ್ಟ ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಪ್ರತಿಯೊಂದು ಮಗುವಿನ ವಿವರಗಳನ್ನೂ ಸಹ ಕೇಂದ್ರೀಯ ನಿರ್ವಹಣೆಯಡಿ ಇರುವ ವಾತ್ಸಲ್ಯ ಪೋರ್ಟಲ್‌ನಲ್ಲಿ ಅಪ್‌ಲೋಡ್ ಆಗುವುದನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಖಾತ್ರಿಪಡಿಸಬೇಕು.

**4. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಈ ಕೆಳಗಿನವುಗಳು ಒಳಗೊಂಡಂತೆ ಎಲ್ಲಾ ಪೂರಕ ಇಲಾಖೆಗಳು/ ಅಧಿಕಾರಿಗಳೊಂದಿಗೆ ಸೂಕ್ತ ಸಹಯೋಗ/ಸಂಯೋಜನೆ ಮತ್ತು ಸಹಭಾಗಿತ್ವವನ್ನು ಪಡೆಯಬೇಕು.**

a. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
b. ಪೊಲೀಸ್ ವರಿಷ್ಠಾಧಿಕಾರಿ
c. ಕಾರ್ಮಿಕ ಅಧಿಕಾರಿ, ಶಿಕ್ಷಣ ಅಧಿಕಾರಿ
d. ಜಿಲ್ಲಾ ವೈದ್ಯಕೀಯ ಅಧಿಕಾರಿ/ ಮುಖ್ಯ ವೈದ್ಯಕೀಯ ಅಧಿಕಾರಿ/ ಸಿವಿಲ್ ಸರ್ಜನ್
e. ಪಂಚಾಯತ್‌ರಾಜ್ ಸಂಸ್ಥೆಗಳು (ಪಿಆರ್‌ಐ) ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳು
f. ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ (ಸಿಡಿಪಿಓ)
g. ಸ್ವಯಂಸೇವಾ ಸಂಸ್ಥೆಗಳು
h. ಆಸ್ಪತ್ರೆಗಳು/ ನರ್ಸಿಂಗ್ ಹೋಂಗಳು
i. ಮಕ್ಕಳ ಕಲ್ಯಾಣ ಸಮಿತಿ
j. ಮಕ್ಕಳ ನ್ಯಾಯ ಮಂಡಲಿ
k. ಜಿಲ್ಲಾ ಮಟ್ಟದಲ್ಲಿ ಮಕ್ಕಳ ರಕ್ಷಣಾ ಕಾರ್ಯಕ್ರಮಗಳು/ ಸೇವೆಗಳ ಮೇಲೆ ನೇರ ಅಥವಾ ಪರೋಕ್ಷ ಪರಿಣಾಮ ಉಂಟು ಮಾಡುವಂತಹ ಇತರೆ ಪ್ರಾಧಿಕಾರಗಳು/ ಸಂಸ್ಥೆಗಳು/ ವ್ಯಕ್ತಿಗಳು, ಇತ್ಯಾದಿ

5. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲೆಯಲ್ಲಿರುವ ಪ್ರತಿ ಪೋಷಣಾ ಮತ್ತು ರಕ್ಷಣಾ ಸಂಸ್ಥೆಗಳ ನಿರ್ವಹಣಾ ಸಮಿತಿಯನ್ನು ಮುನ್ನಡೆಸಬೇಕು ಹಾಗೂ ಮಕ್ಕಳ ಪಾಲನಾ ಮತ್ತು ರಕ್ಷಣಾ ಸಂಸ್ಥೆಗಳ (ಸಿಸಿಐಗಳ) ಕ್ಷೇತ್ರ ಭೇಟಿಗಳನ್ನು ಕೈಗೊಳ್ಳಬೇಕು.
6. ಅಭಿಯಾನದಡಿ ಎಸ್‌ಸಿಪಿಎಸ್‌ನಿಂದ ಬರುವ ಅನುದಾನವನ್ನು ಗರಿಷ್ಟ ಪ್ರಮಾಣದಲ್ಲಿ ಬಳಸಿಕೊಳ್ಳವುದನ್ನು ಖಾತ್ರಿಪಡಿಸಬೇಕು.
7. ಆತ/ಆಕೆ ಕೈಗೊಂಡ ಸಭೆಗಳು ಹಾಗೂ ಸಭೆಯ ನಿರ್ಣಯಗಳಿಗೆ ಸಂಬಂಧಪಟ್ಟಂತೆ ಕೈಗೊಂಡ ಕ್ರಮಗಳ ಕುರಿತು ನಿಯಮಿತವಾಗಿ ವರದಿ ಮಾಡಲು ಪಂಚಾಯತ್‌ರಾಜ್ ಸಂಸ್ಥೆಗಳು (ಪಿಆರ್‌ಐಗಳು– PRIs) ಹಾಗೂ ನಗರ ಸ್ಥಳೀಯ ಸಂಸ್ಥೆ (ಯುಎಲ್‌ಬಿ– ULB) ಗಳೊಂದಿಗೆ ಸಂಯೋಜಿಸಬೇಕು ಹಾಗೂ ಆ ವರದಿಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದನ್ನು ಖಾತ್ರಿಪಡಿಸಬೇಕು.
8. ಸಮುದಾಯದ ಪ್ರತಿನಿಧಿಗಳು ಹಾಗೂ ಸ್ಥಳೀಯ ಸಂಸ್ಥೆಗಳು ಹಾಗೂ ಮಾಧ್ಯಮದವರು ಒಳಗೊಂಡಂತೆ ಎಲ್ಲಾ ಭಾಗೀದಾರರೊಂದಿಗೆ ಮಾಸಿಕ ಪರಿಶೀಲನಾ ಸಭೆಗಳನ್ನು ಆಯೋಜಿಸಬೇಕು.
9. ಮಿಷನ್/ಅಭಿಯಾನದ ಯೋಜನೆಯ ಉದ್ದೇಶಗಳ ಈಡೇರಿಕೆಗಾಗಿ ಜಿಲ್ಲಾಧಿಕಾರಿಗಳು ನಿಯೋಜಿಸುವ ಇತರ ಯಾವುದೇ ಕೆಲಸವನ್ನು ನಿರ್ವಹಿಸಬೇಕು.

## ರಕ್ಷಣಾ ಅಧಿಕಾರಿ (ಸಾಂಸ್ಥಿಕ ಪೋಷಣೆ) –

## Protection Officer (Institutional Care):

(i) ಮಕ್ಕಳು ದಿಕ್ಕಿಲ್ಲದಿರುವಂತಾಗುವುದನ್ನು ತಡೆಗಟ್ಟಲು ಔಟ್‌ರೀಚ್ ಕಾರ್ಯಕರ್ತರ ಬೆಂಬಲದೊಂದಿಗೆ, ಆಪ್ತಸಮಾಲೋಚನೆ, ಆರೋಗ್ಯ ಸೇವೆಗಳ ದೊರೆಯುವಿಕೆ, ಶಿಕ್ಷಣ, ವೃತ್ತಿಪರ ಕೌಶಲ್ಯಗಳು, ಇತ್ಯಾದಿಗಳಂತಹ ಸೇವೆಗಳ ಅಗತ್ಯ ಬೆಂಬಲವನ್ನು ಒದಗಿಸುವುದು/ ವ್ಯವಸ್ಥೆ ಒದಗಿಸುವುದು;

(ii) ಸಂಕಷ್ಟದ ಸನ್ನಿವೇಶದಲ್ಲಿರುವ ಮಕ್ಕಳ ಸಾಂದರ್ಭಿಕ ವಿಶ್ಲೇಷಣೆಯನ್ನು ಕೈಗೊಳ್ಳುವುದು, ಬೆಂಬಲದ ಅಗತ್ಯವಿರುವ ಮಕ್ಕಳು, ಸಂಸ್ಥೆಗಳಲ್ಲಿರುವ ಮಕ್ಕಳ ಸಂಖ್ಯೆ ಹಾಗೂ ಅವರಿಗೆ ಯಾವ ಸೇವೆಗಳ ಅಗತ್ಯವಿದೆ ಎನ್ನುವ ಅಂಶಗಳಿಗೆ ಸಂಬಂಧಪಟ್ಟಂತೆ ಮಕ್ಕಳ ರಕ್ಷಣೆಯ ಸಮಸ್ಯೆಗಳ ವಿವಿಧ ಆಯಾಮಗಳ ಕುರಿತ ದತ್ತಾಂಶ ಸಂಗ್ರಹ ಹಾಗೂ ಕ್ರೋಢೀಕರಣ;

(iii) ಸಂಗ್ರಹಿಸಲ್ಪಟ್ಟ ದತ್ತಾಂಶವನ್ನು ಆಧರಿಸಿ ಜಿಲ್ಲಾ ಮಟ್ಟದಲ್ಲಿ ಸಂಪನ್ಮೂಲ ಮ್ಯಾಪಿಂಗ್ ಚಟುವಟಿಕೆ ಕೈಗೊಳ್ಳುವುದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ ಹಾಗೂ ಮಕ್ಕಳ ಸಂಬಂಧಿತ ಸೇವೆಗಳ ಸಂಪನ್ಮೂಲ ಕೈಪಿಡಿಯನ್ನು ಅಭಿವೃದ್ಧಿಪಡಿಸುವುದು;

(iv) ಜಿಲ್ಲೆಯಲ್ಲಿ ಮುಕ್ತ ತಂಗುದಾಣ ಒಳಗೊಂಡಂತೆ ಎಲ್ಲಾ ಸಾಂಸ್ಥಿಕ ಸೇವಾ ಕಾರ್ಯಕ್ರಮಗಳಲ್ಲಿ ಮಕ್ಕಳ ನಿಗಾವಣಾ ವ್ಯವಸ್ಥೆಯ ರಚನೆ ಹಾಗೂ ನಿರ್ವಹಣೆಯನ್ನು ಖಾತ್ರಿಪಡಿಸುವುದು;

(v) ಮಕ್ಕಳ ವಿಚಾರಣೆ ಹಾಗೂ ಪುನರ್‌ಸ್ಥಾಪನೆಗಾಗಿ ಆ ಪ್ರಕ್ರಿಯೆಯಲ್ಲಿ ಸಿಡಬ್ಲ್ಯೂಸಿಗೆ ಬೆಂಬಲ ಒದಗಿಸುವುದು;

(vi) ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕಣೆ) ಕಾಯ್ದೆ, 2015 ರಡಿ ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳು/ ಸಂಘಟನೆಗಳು/ ಕೇಂದ್ರಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ ಮಾಡುವುದು;

(vii) ಮಕ್ಕಳಿಗೆ ಆಶ್ರಯ ನೀಡಿರುವ ಸರ್ಕಾರಿ ಹಾಗೂ ಸರ್ಕಾರೇತರ (ಬೆಂಬಲಸಹಿತ ಹಾಗೂ ರಹಿತ) ಎರಡೂ ರೀತಿಯ ಮಕ್ಕಳ ಪೋಷಣಾ ಸಂಸ್ಥೆಗಳು/ ಸಂಘಟನೆಗಳು/ ಕೇಂದ್ರಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ, ಹಾಗೂ ಕನಿಷ್ಠ ಪೋಷಣೆ ಮಾನಕಗಳ ಅನುಷ್ಠಾನವನ್ನು ಖಾತ್ರಿಪಡಿಸುವುದು;

(viii) ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳ್ಳುತ್ತಿರುವ ಇತರೆ ಮಕ್ಕಳ ಕಲ್ಯಾಣ ಮತ್ತು ರಕ್ಷಣಾ ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ;

(ix) ರಾಜ್ಯ ಮಕ್ಕಳ ರಕಣಾ ಸೊಸೈಟಿಯ ಸಂಯೋಜನೆಯೊಂದಿಗೆ ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕ ಪೋಷಣಾ ಸೇವೆಗಳನ್ನು ಒದಗಿಸುತಿರುವ ಸಿಬ್ಬಂದಿಗಳ (ಸರ್ಕಾರಿ ಹಾಗೂ ಸರ್ಕಾರೇತರ ಎರಡೂ) ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿಗಾಗಿ ತರಬೇತಿಯ ಅಗತ್ಯವನ್ನು ಗುರುತಿಸುವುದು ಹಾಗೂ ಆಯೋಜಿಸುವುದು;

(x) ಎಲ್ಲಾ ಮಕ್ಕಳಿಗೆ, ಮಕ್ಕಳ ಜನನ ಪ್ರಮಾಣಪತ್ರ, ಆಧಾರ್ ಕಾರ್ಡ್, ಶಾಲೆಗೆ ಹೋಗುತಿರುವ ಪ್ರಮಾಣಪತ್ರ, ಲಸಿಕೆ ಪ್ರಮಾಣಪತ್ರಗಳು, ಆರೋಗ್ಯ ತಪಾಸಣಾ ಚೀಟಿಗಳು, ಇತ್ಯಾದಿಗಳಂತಹ ಎಲ್ಲಾ ದಾಖಲೆಪತ್ರಗಳನ್ನು ಸಿಸಿಐಗೆ ಲಭ್ಯಗೊಳಿಸುವುದನ್ನು ಖಾತ್ರಿಪಡಿಸುವುದು;

(xi) ಸಿಸಿಐಗಳು ಹಾಗೂ ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರಡಿ ನೋಂದಣಿ ಪ್ರಮಾಣಪತ್ರಗಳು ಪರಿಶೀಲಿಸಲಟ್ಟಿರುವುದು ಹಾಗೂ ಕಾಲಕಾಲಿಕ್ಕೆ ಅಪ್‌ಡೇಟ್ ಆಗೆರುವುದನ್ನು ಖಾತ್ರಿಪಡಿಸುವುದು ಹಾಗೂ ಮಕ್ಕಳ ನ್ಯಾಯ ಕಾಯ್ದೆ/ ನಿಯಮಾವಳಿಗಳಡಿ ನಿಗಧಿಪಡಿಸಿರುವ ಮಾನಕಗಳ/ ಪ್ರಮಾಣಿತ ಗುಣಮಟ್ಟದ ಕ್ರಮಬದ್ದ ಕಾರ್ಯವಿಧಾನಗಳ ಪ್ರಕಾರ ಹೊಸ ಸಿಸಿಐಗಳ ನೋಂದಣಿಯನ್ನು ಕೈಗೊಳ್ಳುವುದು;

(xii) ಸಿಸಿಐಗಳನ್ನು ನಡೆಸುತಿರುವ ಸರ್ಕಾರೇತರ ಸಂಸ್ಥೆಗಳು ನೀತಿ ಆಯೋಗ ನಿರ್ವಹಿಸುತಿರುವ ದರ್ಪಣ್ ಪೋರ್ಟಲ್‌ನಲ್ಲಿ ನೋಂದಣಿ ಆಗುವುದನ್ನು ಖಾತ್ರಿಪಡಿಸುವುದು ಹಾಗೂ ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆ (ವೆಫ್‌ಸಿಆರ್‌ಎ–ಈಅಖಂ) ಒಳಗೊಂಡಂತೆ ಎಲ್ಲಾ ಸರ್ಕಾರಿ ನಿಬಂಧನೆಗಳ ಅನುಸರಣೆಯನ್ನು ಮಾಡುತ್ತಿರುವುದನ್ನು ಖಾತ್ರಿಪಡಿಸುವುದು;

(xiii) ಎಲ್ಲಾ ಸರ್ಕಾರೇತರ ಸಂಸ್ಥೆಗಳು ಹಾಗೂ ಸಿಸಿಐ (ಅನುದಾನಿತ ಹಾಗೂ ಅನುದಾನರಹಿತ) ಸಿಬ್ಬಂದಿಗಳ ದಾಖಲೆಪತ್ರಗಳನ್ನು ಖಾತ್ರಿಪಡಿಸಲು ಅವರ ಹಿನ್ನೆಲೆಯನ್ನು ಖಾತ್ರಿಪಡಿಸುವುದು;

(xiv) ಡಿಸಿಪಿಓಗೆ ಒದಗಿಸುವ ಜಿಲ್ಲಾ ವರದಿಯಲ್ಲಿ ಸಿಸಿಐಗಳ ಮಾಸಿಕ ಅಂದಾಜಿಸುವಿಕೆಯನ್ನು ಸಿದ್ಧಪಡಿಸುವುದು ಹಾಗೂ ಸಲ್ಲಿಸುವುದು;

(xv) ಅಭಿಯಾನ ಉದ್ದೇಶಗಳ ಈಡೇರಿಕೆಯ ಸಂಬಂಧ ಡಿಸಿಪಿಓ ನಿಯೋಜಿಸುವ ಮತ್ಯಾವುದಾದರೂ ಕೆಲಸ.

## ರಕ್ಷಣಾ ಅಧಿಕಾರಿ (ಸಾಂಸ್ಥಿಕೇತರ ಪೋಷಣೆ) –
## Protection Officer (Non-Institutional Care:

(i) ಮಕ್ಕಳು ದಿಕ್ಕಿಲ್ಲದಿರುವಂತಾಗುವುದನ್ನು ತಡೆಗಟ್ಟಲು ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸಿ, ಅಗತ್ಯವಿರುವ ಕಡೆ ಸಾಂಸ್ಥಿಕೇತರ ಪೋಷಣೆಗಾಗಿ ಅಗತ್ಯ ಬೆಂಬಲವನ್ನು ಒದಗಿಸುವುದು/ ವ್ಯವಸ್ಥೆ ಮಾಡುವುದು;

(ii) ಜಿಲ್ಲೆಯಿಂದ ದತ್ತುಗೆ ಅರ್ಹವಿರುವ ಮಕ್ಕಳನ್ನು ಗುರುತಿಸುವಲ್ಲಿ ಜಿಲ್ಲಾ ದಂಡಾಧಿಕಾರಿಗೆ ಬೆಂಬಲ ನೀಡುವುದು ಹಾಗೂ ದತ್ತುಗೆ ಸಿದ್ಧವಾಗಿರುವ ಮಕ್ಕಳ ಜಿಲ್ಲಾಮಟ್ಟದ ಡೇಟಾಬೇಸನ್ನು ಸಿದ್ಧಪಡಿಸುವುದು;

(iii) ಎಸ್‌ಎಎ–SAA ನೆರವಿನೊಂದಿಗೆ ಜಿಲ್ಲೆಯಲ್ಲಿ ದತ್ತುಗೆ ಪ್ರೋತ್ಸಾಹ ನೀಡುವುದು ಹಾಗೂ ಸುಗಮಗಾರಿಕೆ (Facilitate) ಮಾಡುವುದು:

(iv) ಎಲ್ಲಾ ಮಕ್ಕಳ ಪೋಷಣಾ ಸಂಸ್ಥೆಗಳಲ್ಲಿ (ಸಿಸಿಐ ಗಳಲ್ಲಿ) ದತ್ತುಗೆ ಸಿದ್ಧವಾಗಿರುವ ಎಲ್ಲಾ ಮಕ್ಕಳನ್ನೂ ಸಹ ದತ್ತು ವ್ಯವಸ್ಥೆಯಡಿ ತರುವುದನ್ನು ಖಾತ್ರಿಪಡಿಸುವುದು; (ಇಲ್ಲಿ ಪ್ರತ್ಯೇಕ 3 ಅಂಶ ಇದೆ)

(v) ಫಾಸ್ಟರ್ ಕೇರ್, ಪ್ರಾಯೋಜಕತ್ವ ಹಾಗೂ ಅನುಪಾಲನಾ ಸೇವೆ ಕಾರ್ಯಕ್ರಮಗಳ ಮೂಲಕ ಕುಟುಂಬ ಆಧಾರಿತ ಸಾಂಸ್ಥಿಕೇತರ ಪೋಷಣೆಯನ್ನು ಕೈಗೊಳ್ಳುವುದು;

(vi) ಸಂಪನ್ಮೂಲ ಮ್ಯಾಪಿಂಗ್ ನಡೆಸುವುದು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ ಅಭಿವೃದ್ಧಿಗೆ ಕೊಡುಗೆ ನೀಡುವುದು ಮತ್ತು ದತ್ತಾಂಶ ಸಂಗ್ರಹ ಆಧಾರದ ಮೇಲೆ ಜಿಲ್ಲಾ ಮಟ್ಟದಲ್ಲಿ ಸಾಂಸ್ಥಿಕೇತರ ಪೋಷಣೆಗಾಗಿ ಮಕ್ಕಳ ಸಂಬಂಧಿ ಸೇವೆಗಳ ಸಂಪನ್ಮೂಲ ಕೈಪಿಡಿಯನ್ನು ಅಭಿವೃದ್ಧಿಪಡಿಸುವುದು;

(vii) ಜಿಲ್ಲೆಯಲ್ಲಿ ವಾತಲ್ಯ ಪೋರ್ಟಲ್‌ನಲ್ಲಿ ಮಕ್ಕಳ ವಿವರಗಳನ್ನು ಅಪ್‌ಲೋಡ್ ಮಾಡಲು ನೋಡಲ್ ಅಧಿಕಾರಿಯಂತೆ ಕಾರ್ಯನಿರ್ವಹಿಸುವುದು;

(viii) ಮಕ್ಕಳ ವಿಚಾರಣೆ ಹಾಗೂ ಪುನರ್‌ಸ್ಥಾಪನೆಯ ಪ್ರಕ್ರಿಯೆಯಲ್ಲಿ ಸಿಡಬ್ಲ್ಯೂಸಿಗೆ ಬೆಂಬಲ ನೀಡುವುದು;

(ix) ಜಿಲ್ಲೆಯಲ್ಲಿ ಎಸ್‌ಎಎಗಳು ಒಳಗೊಂಡಂತೆ ಮಕ್ಕಳ ಪೋಷಣಾ ಸಂಸ್ಥೆಗಳ ಮೇಲ್ವಿಚಾರಣೆ ಹಾಗೂ ನಿಗಾವಣೆ;

(x) ಮಕ್ಕಳಿಗೆ ಸಾಂಸ್ಥಿಕೇತರ ಪೋಷಣೆ ಒದಗಿಸುತ್ತಿರುವ ಎಲ್ಲಾ ಸಿಬ್ಬಂದಿಗಳ (ಸರ್ಕಾರಿ ಹಾಗೂ ಸರ್ಕಾರೇತರ) ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿಗಾಗಿ ಎಸ್‌ಎಆರ್‌ಎ ಹಾಗೂ ಎಸ್‌ಸಿಪಿಎಸ್ ನೊಂದಿಗೆ ಸಂಯೋಜನೆ; ಹಾಗೂ

(xi) ಜಿಲ್ಲೆಯಲ್ಲಿ ದತ್ತು ಕಾರ್ಯಕ್ರಮದ ಸ್ಥಿತಿಗತಿ ಕುರಿತು ಎಸ್‌ಎಆರ್‌ಎ ಗೆ ತ್ರೈಮಾಸಿಕ ವರದಿ ಸಲ್ಲಿಸುವುದು;

(x) ಅಭಿಯಾನದ ಉದ್ದೇಶಗಳ ಪೂರೈಕೆಗಾಗಿ ಡಿಸಿಪಿಓ ವಹಿಸುವ ಮತ್ಯಾವುದಾದರೂ ಕೆಲಸವನ್ನು ನಿರ್ವಹಿಸುವುದು.

## ಕಾನೂನು–ಕಂ–ಪರಿವೀಕ್ಷಣಾಧಿಕಾರಿ–Legal-cum-Probation Officer:

(i) ಜಿಲ್ಲೆಯಲ್ಲಿ ಕಾನೂನಿನ ಸಂಘರ್ಷಕ್ಕೆ ಒಳಗಾದ ಮಕ್ಕಳ ವಿವಿಧ ಆಯಾಮಗಳ ದತ್ತಾಂಶ ಸಂಗ್ರಹ ಹಾಗೂ ಕ್ರೋಢೀಕರಣ.

(ii) ಮಕ್ಕಳ ನ್ಯಾಯ ಮಂಡಳಿಯ ಸಭೆಗಳಿಗೆ ಹಾಜರಾಗುವುದು.

(iii) ವಿಚಾರಣೆಗಳನ್ನು ನಡೆಸಲು ಜೆಜೆಬಿಗೆ ಬೆಂಬಲ ನೀಡುವುದು.

(vi) ಸಾಮಾಜಿಕ ತಪಾಸಣಾ ವರದಿಗಳನ್ನು (SIR- Social Investigation Report) ಸಿದ್ಧಪಡಿಸುವುದು ಹಾಗೂ ಸಲ್ಲಿಸುವುದು.

(v) ಪ್ರಕರಣ ಕಡತಗಳು ಹಾಗೂ ಇತರೆ ವಹಿಗಳ ನಿರ್ವಹಣೆ.

(vi) ಸಿಸಿಎಲ್ (ಕಾನೂನು ಸಂಘರ್ಷಕ್ಕೆ ಒಳಗಾದ ಮಗು) ಅನ್ನು ಜೆಜೆಬಿಯಿಂದ ಮನೆಗೆ/ ಫಿಟ್ ವ್ಯಕ್ತಿಯಲ್ಲಿಗೆ/ ಫಿಟ್ ಸಂಸ್ಥೆಗೆ ಕರೆದುಕೊಂಡು ಹೋಗುವುದು.

(vii) ಮೇಲ್ವಿಚಾರಣೆ ಹಾಗೂ ಬಿಡುಗಡೆಯ ನಂತರದಲ್ಲಿ ಬಿಡುಗಡೆಗೊಂಡಿರುವ ಸಿಸಿಎಲ್ CCL- Children in Conflict with Law) ಗಳ ಅನುಸರಣಾ ಭೇಟಿಗಳನ್ನು ಕೈಗೊಳ್ಳುವುದು.

(viii) ಸಿಸಿಎಲ್ ಮಗುವಿನ/ಮಕ್ಕಳ ಪುನರ್ವಸತಿ ಹಾಗೂ ಸಾಮಾಜಿಕ ಮರುಏಕೀಕರಣಕ್ಕಾಗಿ ಸ್ವಯಂಸೇವಾ ಕ್ಷೇತ್ರದೊಂದಿಗೆ ಸಂಪರ್ಕಗಳನ್ನು ಸ್ಥಾಪಿಸುವುದು.

(ix) ಅಭಿಯಾನದ ಉದ್ದೇಶಗಳ ಈಡೇರಿಕೆಗಾಗಿ ಡಿಸಿಪಿಓ ನಿಯೋಜಿಸುವ ಮತ್ಯಾವುದಾದರೂ ಕೆಲಸವನ್ನು ನಿರ್ವಹಿಸುವುದು.

## ಆಪ್ತಸಮಾಲೋಚಕ – Counsellor:

- ಜಿಲ್ಲಾ ಮಟ್ಟದಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಹಾಗೂ ಪೋಷಣೆ ಮತ್ತು ರಕ್ಷಣೆಯ ಅಗತ್ಯವಿರುವಂತಹ ಮಕ್ಕಳಿಗೆ ಹಾಗೂ ಅವರ ಪೋಷಕರು ಹಾಗೂ ಕುಟುಂಬಗಳಿಗೆ ಆಪ್ತಸಮಾಲೋಚನೆ ಸೇವೆಗಳನ್ನು ಒದಗಿಸಲು ಪ್ರತಿ ಮಕ್ಕಳ ರಕ್ಷಣಾ ಘಟಕವೂ ಸಹ ಓರ್ವ ಆಪ್ತಸಮಾಲೋಚಕರನ್ನು ಹೊಂದಿರಬೇಕು. ಡಿಸಿಪಿಯುದಲ್ಲಿರುವ **ಆಪ್ತಸಮಾಲೋಚಕರು, ಸಂಸ್ಥೆಗಳಲ್ಲಿರುವ ಆಪ್ತಸಮಾಲೋಚಕರ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುತ್ತಾರೆ ಹಾಗೂ ಡಿಸಿಪಿಯುದೊಂದಿಗೆ ಸಂಪರ್ಕಕ್ಕೆ ಬರುವಂತಹ ಮಕ್ಕಳು ಹಾಗೂ ಕುಟುಂಬಗಳಿಗೆ ಆಪ್ತಸಮಾಲೋಚನೆ ಒದಗಿಸಲು ಜವಾಬ್ದಾರರಾಗಿರುತ್ತಾರೆ.**

## ಸಾಮಾಜಿಕ ಕಾರ್ಯಕರ್ತ – Social Worker:

- ಪ್ರತಿ ಮಕ್ಕಳ ರಕ್ಷಣಾ ಘಟಕವೂ ಸಹ ಇಬ್ಬರು ಸಾಮಾಜಿಕ ಕಾರ್ಯಕರ್ತರನ್ನು (ಕನಿಷ್ಠ ಓರ್ವ ಮಹಿಳೆ) ಹೊಂದಿರಬೇಕು ಹಾಗೂ ಅವರು ಡಿಸಿಪಿಓ ನಿಯೋಜಿಸುವ ಪ್ರಕಾರ ಉಪ-ವಿಭಾಗಗಳ ಸಂಬಂಧಪಟ್ಟ ಕ್ಲಸ್ಟರ್‌ಗಳಲ್ಲಿನ ಕ್ಷೇತ್ರ ಮಟ್ಟದ ಚಟುವಟಿಕೆಗಳ ಸಂಯೋಜನೆಯ ಜವಾಬ್ದಾರರಾಗಿರುತ್ತಾರೆ. ಈ ಸಾಮಾಜಿಕ ಕಾರ್ಯಕರ್ತರಿಗೆ ಕ್ಷೇತ್ರಮಟ್ಟದಲ್ಲಿ ಮಧ್ಯಸ್ಥಿಕೆಗಳನ್ನು ಕೈಗೊಳ್ಳಲು ಔಟ್‌ರೀಚ್ ಕಾರ್ಯಕರ್ತರು ಸಹಾಯ ಮಾಡುತ್ತಾರೆ.

## ದತ್ತಾಂಶ ವಿಶ್ಲೇಷಕ - Data Analyst:

- ಜಿಲ್ಲಾ ಮಟ್ಟದಲ್ಲಿ ಪ್ರತಿ ಮಕ್ಕಳ ರಕ್ಷಣಾ ಘಟಕದಲ್ಲಿಯೂ ಸಹ ಓರ್ವ ದತ್ತಾಂಶ ವಿಶ್ಲೇಷಕರು (Data Analyst) ಇರಬೇಕು. ದತ್ತಾಂಶ ವಿವರಣೆ, ಸಾಂಖ್ಯಿಕ ತಂತ್ರಗಳನ್ನು ಬಳಸಿ ಫಲಿತಾಂಶಗಳ ವಿಶ್ಲೇಷಣೆ ಮಾಡುವುದು ಇವರ ಜವಾಬ್ದಾರಿಯಾಗಿರುತ್ತದೆ. ಆತ/ಆಕೆ, ಸಾಂಖ್ಯಿಕ ಸಾಮರ್ಥ್ಯ ಹಾಗೂ ಗುಣಮಟ್ಟವನ್ನು ವೃದ್ಧಿಸುವಂತಹ ದತ್ತಾಂಶ ವಿಶ್ಲೇಷಣೆ, ದತ್ತಾಂಶ ಸಂಗ್ರಹ ವ್ಯವಸ್ಥೆಗಳು ಹಾಗೂ ಇತರೆ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಬೇಕು. ಈ ದತ್ತಾಂಶ ವಿಶ್ಲೇಷಕರು ಪ್ರಾಥಮಿಕ ಅಥವಾ ಮಾಧ್ಯಮಿಕ ದತ್ತಾಂಶ ಮೂಲಗಳಿಂದ ದತ್ತಾಂಶ ಸಂಗ್ರಹಿಸಿ, ಜಿಲ್ಲೆಯ ಡಿಸಿಪಿಯುದಲ್ಲಿ ಆ ಡೇಟಾಬೇಸ್ ಅನ್ನು ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ದತ್ತಾಂಶ ವಿಶ್ಲೇಷಕರು ಆಯಾ ಜಿಲ್ಲೆಯ ನಿರ್ಧಿಷ್ಟ ದತ್ತಾಂಶ ಅಗತ್ಯಗಳ ರೂಪರೇಶೆಯನ್ನು ಹಾಗೂ ಅಭಿಯಾನದಡಿ ಜಿಲ್ಲೆಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಡಿಸಿಪಿಓ ಜೊತೆಗೆ ಕೆಲಸ ನಿರ್ವಹಿಸಬೇಕು.

## ಔಟ್‌ರೀಚ್ ಕಾರ್ಯಕರ್ತ - Outreach Worker:

- ಪ್ರತಿ ಜಿಲ್ಲೆಯಲ್ಲೂ ಸಹ ಪ್ರತಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲೂ ಸಹ ಇಬ್ಬರು ಔಟ್‌ರೀಚ್ ಕಾರ್ಯಕರ್ತರಿರಬೇಕು ಹಾಗೂ ಅವರು ರಕ್ಷಣಾ ಅಧಿಕಾರಿಗಳು ಹಾಗೂ ಕಾನೂನು–ಕಂ–ಪರಿವೀಕ್ಷಣಾಧಿಕಾರಿಗಳಿಗೆ ವರದಿ ಮಾಡಿಕೊಳ್ಳಬೇಕು. ಪ್ರತಿ ಔಟ್‌ರೀಚ್ ಕಾರ್ಯಕರ್ತರೂ ಸಹ ತಮಗೆ ಸಂಬಂಧಪಟ್ಟ ಮೇಲಧಿಕಾರಿಗೆ ಅವರ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ಕೈಗೊಳ್ಳಲು ನೆರವಾಗಬೇಕು. ಜಿಲ್ಲೆಯಲ್ಲಿರುವ ಬ್ಲಾಕ್‌ಗಳು, ಭೌಗೋಳಿಕ ಪ್ರದೇಶ, ಜನಸಂಖ್ಯೆ ಹಾಗೂ ಪ್ರಕರಣಗಳ ಹೊರೆಯನ್ನು ಅಧರಿಸಿ ಈ ಔಟ್‌ರೀಚ್ ಕಾರ್ಯಕರ್ತರ ಸಂಖ್ಯೆಯನ್ನು ಗರಿಷ್ಠ ಐದರವರೆಗೆ (05) ಹೆಚ್ಚಿಸಬಹುದು.
- ಅವರು ಸಮುದಾಯ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನಡುವೆ ಸಂಪರ್ಕಕೊಂಡಿಯಾಗಿ ಕಾರ್ಯನಿರ್ವಹಿಸುವರು ಹಾಗೂ ಗಂಡಾಂತರದಲ್ಲಿರುವ ಕುಟುಂಬಗಳು ಹಾಗೂ ಮಕ್ಕಳನ್ನು ಗುರುತಿಸಲು ಹಾಗೂ ಅಗತ್ಯ ಬೆಂಬಲ ಸೇವೆಗಳನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ. ಈ ಔಟ್‌ರೀಚ್ ಕಾರ್ಯಕರ್ತರು ಅಂಗನವಾಡಿ ಕಾರ್ಯಕರ್ತರು ಹಾಗೂ ಸಮುದಾಯ/ ಬ್ಲಾಕ್ ಮಟ್ಟಗಳಲ್ಲಿ ಪಂಚಾಯತ್/ ಸ್ಥಳೀಯ ಸಂಸ್ಥೆಗಳ ಸದಸ್ಯರೊಂದಿಗೆ ಸಂಪರ್ಕ ಹಾಗೂ ನೆಟ್‌ವರ್ಕಿಂಗ್ ಅಭಿವೃದ್ಧಿಪಡಿಸಲು ಜವಾಬ್ದಾರರಾಗಿರುತ್ತಾರೆ. ಜೊತೆಗೆ ಅವರು ಸ್ಥಳೀಯ ಯುವಜನರಿಗೆ ಸ್ವಯಂಸೇವೆಯನ್ನು ಕೈಗೊಳ್ಳಲು ಪ್ರೋತ್ಸಾಹ ನೀಡಿ, ಬ್ಲಾಕ್ ಹಾಗೂ ಸಮುದಾಯ ಮಟ್ಟಗಳಲ್ಲಿ ಅವರು ಮಕ್ಕಳ ರಕ್ಷಣಾ ಕಾರ್ಯಕ್ರಮಗಳಲ್ಲಿ ಒಳಗೊಳ್ಳುವಂತೆ ಕಾರ್ಯನಿರ್ವಹಿಸಬೇಕು.

## 2.12 ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳು – Child Welfare and Protection Committees:

**ಪಂಚಾಯಿತಿ ರಾಜ್ ಸಂಸ್ಥೆ**

- ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣ (ಅಭಿವೃದ್ಧಿ) ಕಾರ್ಯಗಳೊಂದಿಗೆ ವ್ಯವಹರಿಸುತ್ತಿರುವ **ಜಿಲ್ಲಾ ಪಂಚಾಯತ್**
- ಮಹಿಳೆಯರು ಹಾಗೂ ಮಕ್ಕಳೊಂದಿಗೆ ವ್ಯವಹರಿಸುತ್ತಿರುವ **ತಾಲ್ಲೂಕು ಮಟ್ಟದ ಸಮಿತಿ**
- ಮಹಿಳೆಯರು ಹಾಗೂ ಮಕ್ಕಳ ಸಾಮಾಜಿಕ ನ್ಯಾಯ/ ಕಲ್ಯಾಣಕ್ಕೆ ಸಂಬಂಧಪಟ್ಟ **ಗ್ರಾಮ ಪಂಚಾಯಿತಿ ಸ್ಥಾಯಿ ಉಪ–ಸಮಿತಿ–WCPC**
- **ನಗರ ಸ್ಥಳೀಯ ಸಂಸ್ಥೆ: 1.** ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣಕ್ಕೆ ಸಂಬಂಧಪಟ್ಟ ವಿಷಯಗಳನ್ನು ನೋಡಿಕೊಳ್ಳುವ ಮುನಿಸಿಪಾಲಿಟಿ/ನಗರ ಸಭೆ/ಪುರಸಭೆ ಹಂತದ ಸ್ಥಾಯಿ ಸಮಿತಿ.

2. ಪ್ರದೇಶದಲ್ಲಿನ ಮಹಿಳೆಯರು ಹಾಗೂ ಮಕ್ಕಳ ಕಲ್ಯಾಣಕ್ಕೆ ಸಂಬಂಧಪಟ್ಟ ವಿಷಯಗಳೊಂದಿಗೆ ವ್ಯವಹರಿಸುವ ವಾರ್ಡ್ ಮಟ್ಟದ ಸಮಿತಿ.

### ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿಗಳ ಪ್ರಮುಖ ಕಾರ್ಯನಿರ್ವಹಣೆಗಳು:

(i) ಗ್ರಾಮಗಳು/ಗ್ರಾಮ ಪಂಚಾಯಿತಿ/ತಾಲ್ಲೂಕು/ ವಾರ್ಡ್ ಪ್ರದೇಶಗಳು ಮಕ್ಕಳ ಸ್ನೇಹಿ ಪರಿಸರ ಹಾಗೂ ಮಕ್ಕಳಿಗೆ ಸುರಕ್ಷಿತ ಸಾರ್ವಜನಿಕ ಸ್ಥಳವೆಂದು ಖಾತ್ರಿಪಡಿಸುವುದು.

(ii) ಮಹಿಳೆಯರು ಹಾಗೂ ಮಕ್ಕಳ ಸಂಬಂಧಿತ ಚಟುವಟಿಕೆಗಳನ್ನು ಬೆಂಬಲಿಸಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯಲ್ಲಿ **(ಜಿಪಿಡಿಪಿ–GPDP-Gram Panchayat Development Plan) ನಿಬಂಧನೆಯನ್ನು ಸೇರ್ಪಡೆಗೊಳಿಸಲು ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸಲಹೆ ನೀಡುವುದು.**

(iii) ನಗರ ವಾರ್ಡ್ ಪ್ರದೇಶಗಳಲ್ಲಿ ಮಹಿಳೆಯರು ಹಾಗೂ ಮಕ್ಕಳಿಗೆ ಮಹಾನಗರ **ಪಾಲಿಕೆ/ಮುನಿಸಿಪಲ್/ನಗರ ಸಭೆ/ಪುರಸಭೆಗಳಲ್ಲಿ ಪ್ರತ್ಯೇಕ ಆಯವ್ಯಯ ನಿಗಧಿಪಡಿಸುವುದನ್ನು ಖಾತ್ರಿಪಡಿಸುವುದು.**

(iv) ಆಯಾ ಪ್ರದೇಶದಲ್ಲಿನ ಮಕ್ಕಳಿಗಾಗಿ **ಪೂರಕ ಯೋಜನೆಗಳು ಹಾಗೂ ಕಾರ್ಯಕ್ರಮಗಳ** ಅನುಷ್ಠಾನದ ಪರಿಶೀಲನೆ ಹಾಗೂ ಅಂದಾಜಿಸುವಿಕೆ.

(v) ಸಂಭವನೀಯವಾಗಿ ಸಂಕಷ್ಟದ ಸನ್ನಿವೇಶದಲ್ಲಿರುವ ಮಕ್ಕಳು, ಅನಾಥ ಮಕ್ಕಳು, ಬೀದಿ ಮಕ್ಕಳು, ಇತ್ಯಾದಿ ಮಕ್ಕಳ ಹಾಗೂ ವಿಶೇಷ ಅಗತ್ಯವಿರುವ ಎಲ್ಲಾ ಮಕ್ಕಳ ಸಮೀಕ್ಷೆಯನ್ನು ಖಾತ್ರಿಪಡಿಸುವ ಮುಖಾಂತರ **ಯಾವುದೇ ಮಗು ಸಂರಕ್ಷಣೆಯಿಂದ ತಪ್ಪಿಸಿಕೊಳ್ಳದಂತೆ/ನಿರ್ಲಕ್ಷ್ಯಕ್ಕೆ ಒಳಗಾಗದಂತೆ ನೋಡುವುದು.**

(vi) ತಪ್ಪಿಸಿಕೊಂಡಿರುವ ಮಕ್ಕಳು, ಶಾಲೆಯಿಂದ ಹೊರಗುಳಿದಿರುವ ಮಕ್ಕಳು, ಮಾನವ ಕಳ್ಳ ಸಾಗಣೆಯ ಸಂತ್ರಸ್ತರು, ವಲಸೆ ಬಂದ ಮಕ್ಕಳು, ಭಿಕ್ಷುಕರು, ಅನಾಥ ಮಕ್ಕಳಂತಹ ಸಂಕಷ್ಟಕ್ಕೀಡಾಗಿರುವ ಮಕ್ಕಳ ಸ್ಥಿತಿಗತಿಯ ಕುರಿತು ಚರ್ಚಿಸಿ, ಅವರ ಯೋಗಕ್ಷೇಮಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದು.

(vii) ಮಕ್ಕಳ ಹಕ್ಕುಗಳನ್ನು ಪ್ರೋತ್ಸಾಹಿಸಲು ಹಾಗೂ ಮಕ್ಕಳ ರಕ್ಷಣೆಯನ್ನು ಖಾತ್ರಿಪಡಿಸಲು ವಿಶೇಷ ಅಭಿಯಾನಗಳು ಹಾಗೂ ಅರಿವು ಮೂಡಿಸುವ ಅಭಿಯಾನಗಳನ್ನು ಆಯೋಜಿಸುವುದು.

(viii) ಡಿಸಿಪಿಯುಗಳು, ಸಿಡಬ್ಲ್ಯೂಸಿಗಳು, ಜೆಜೆಬಿಗಳು ಹಾಗೂ ಎಸ್‌ಜೆಪಿಗಳಿಗೆ ಮಕ್ಕಳ ನ್ಯಾಯ ಕಾಯ್ದೆ/ ನಿಯಮಾವಳಿಗಳಡಿ ಅವರ ಕರ್ತವ್ಯಗಳನ್ನು ಕೈಗೊಳ್ಳಲು ಬೆಂಬಲವನ್ನು ಖಾತ್ರಿಪಡಿಸುವುದು.

(ix) ಮಕ್ಕಳ ನ್ಯಾಯ ಹಾಗೂ ಮಕ್ಕಳ ಸಂರಕ್ಷಣೆಯ ಕ್ಷೇತ್ರದಲ್ಲಿ ಸ್ವಯಂಸೇವೆಯನ್ನು ಉತ್ತೇಜಿಸುವುದು.

(x) ಆಪ್ತಸಮಾಲೋಚನೆ, ಕೌಶಲ್ಯ ತರಬೇತಿ ದಾಖಲಾತಿ, ಕರಕುಶಲಕರ್ಮಿಗಳ ದಾಖಲಾತಿ, ಕ್ರೀಡಾ ಕ್ಲಬ್‌ಗಳು/ ಶಿಬಿರಗಳು, ಇತ್ಯಾದಿಗಳಂತಹ ಮಕ್ಕಳ ಪೋಷಣೆ, ಪುನರ್ವಸತಿ ಹಾಗೂ ಸಾಮಾಜಿಕ ಮರುಏಕೀಕರಣದ ಒಮ್ಮುಖ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದು.

(xi) ಮಕ್ಕಳು ಸಂಕಷ್ಟಕ್ಕೀಡಾಗುವ ಸಂಭವವಿರುವ ಪ್ರಮುಖ ಸ್ಥಳಗಳ ಕುರಿತು ಡಿಸಿಪಿಯು ಮೂಲಕ ಜಿಲ್ಲಾ ದಂಡಾಧಿಕಾರಿಗಳಿಗೆ ವರದಿ ಮಾಡುವುದು ಹಾಗೂ ಅದನ್ನು ಬಗೆಹರಿಸಲು ಕಾರ್ಯತಂತ್ರ ರೂಪಿಸುವುದು.

(xii) ಶಾಲೆಗಳಲ್ಲಿ ಮಕ್ಕಳನ್ನು ಒಳಗೊಂಡಂತೆ ಗ್ರಾಮಗಳಲ್ಲಿ ಬಾಲ (ಮಕ್ಕಳ) ಪಂಚಾಯಿತಿಗಳನ್ನು ಆಯೋಜಿಸುವುದು (MHGS) ಹಾಗೂ ಮಕ್ಕಳ ರಾಯಭಾರಿಗಳನ್ನು ನೇಮಕ ಮಾಡುವುದು; ಹಾಗೂ ಸೂಕ್ತ ಕ್ರಮಕ್ಕಾಗಿ ಗ್ರಾಮ ಪಂಚಾಯಿತಿಗಳ ಮುಂದೆ ವಿವಿಧ ವಿಷಯಗಳ ಕುರಿತು ಮಕ್ಕಳಿಂದ ಮಾಹಿತಿ ಸಂಗ್ರಹಿಸಿ ಮಂಡಿಸುವುದು.

# ವ್ಯವಸ್ಥೆಗಳು

**ಜಿಲ್ಲಾ ಮಕ್ಕಳ ರಕ್ಷಣಾ ಘಟಕ– DCPU**
**ಮಕ್ಕಳ ಕಲ್ಯಾಣ ಸಮಿತಿ–CWC**
**ಮಕ್ಕಳ ನ್ಯಾಯ ಮಂಡಳಿ–JJB**
**ಮಕ್ಕಳ ವಿಶೇಷ ಪೊಲೀಸ್ ಘಟಕ– SJPU**
**ದತ್ತು ಕೇಂದ್ರ–Adoption Centre**
**ಮಕ್ಕಳ ಪೋಷಣೆ ಮತ್ತು ರಕ್ಷಣಾ ಕೇಂದ್ರ–CCIs (Children's Home,OH, Special Home. Place of Safety, Fit Person)**
**ಚೈಲ್ಡ್ ಲೈನ್–1098 (ಮಕ್ಕಳ ಸಹಾಯವಾಣಿ)**
**ತಾಲೂಕು ಮಕ್ಕಳ ರಕ್ಷಣಾ ಘಟಕ–TCPU-TCPO (CDPO)**
**ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ–WCPC-GP Level**
**ಮಕ್ಕಳ ರಕ್ಷಣಾ ಸಮಿತಿ– VCPC-Village Level**

## ವಿವಿಧ ವ್ಯವಸ್ಥೆಗಳು

- ಅಂಗನವಾಡಿ **ಭಾವಿಸ** ಮತ್ತು **ಕಿಶೋರಿ ಸಂಘ** (ಎಲ್ಲಾ ಹಾಸ್ಟೇಲ್‌ಗಳಲ್ಲಿ **ಮಕ್ಕಳ ಸುರಕ್ಷತಾ ನೀತಿ/ಸಮಿತಿ–CPC**
- ಪೊಲೀಸ್ ಠಾಣೆಯಲ್ಲಿ **ತೆರೆದ ಮನೆ**
- ಶಾಲೆಗಳಲ್ಲಿ **ಮಕ್ಕಳ ಸುರಕ್ಷತಾ ನೀತಿ/ಸಮಿತಿ–CPC ಹಾಗೂ ಮಕ್ಕಳ ಹಕ್ಕುಗಳ ಕ್ಲಬ್–CRC**
- ಗ್ರಾಮ ಪಂಚಾಯತಿ ಮಟ್ಟದಲ್ಲಿ **ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ.– WCPC**
- ತಾಲೂಕು ಮಟ್ಟದಲ್ಲಿ **ತಾಲೂಕು ಮಕ್ಕಳ ರಕ್ಷಣಾ ಘಟಕ – TCPO (ಇತರ 4 ಸಮಿತಿ)**
- **ಜಿಲ್ಲಾ ಮಕ್ಕಳ ರಕ್ಷಣಾ ಘಟಕ – DCPC (ಇತರ 4 ಸಮಿತಿ)**
- **ಜಿಲ್ಲಾ ಮಕ್ಕಳ ವಿಶೇಷ ಪೊಲೀಸ್ ಘಟಕ**

**ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಈ ಕೆಳಗಿನವುಗಳು ಒಳಗೊಂಡಂತೆ ಎಲ್ಲಾ ಪೂರಕ ಇಲಾಖೆಗಳು/ ಅಧಿಕಾರಿಗಳೊಂದಿಗೆ ಸೂಕ್ತ ಸಹಯೋಗ/ಸಂಯೋಜನೆ ಮತ್ತು ಸಹಭಾಗಿತ್ವವನ್ನು ಪಡೆಯಬೇಕು.**

- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
- ಪೊಲೀಸ್ ವರಿಷ್ಠಾಧಿಕಾರಿ
- ಕಾರ್ಮಿಕ ಅಧಿಕಾರಿ, ಶಿಕ್ಷಣ ಅಧಿಕಾರಿ
- ಜಿಲ್ಲಾ ವೈದ್ಯಕೀಯ ಅಧಿಕಾರಿ/ ಮುಖ್ಯ ವೈದ್ಯಕೀಯ ಅಧಿಕಾರಿ/ ಸಿವಿಲ್ ಸರ್ಜನ್
- ಪಂಚಾಯತ್‌ರಾಜ್ ಸಂಸ್ಥೆಗಳು (ಪಿಆರ್‌ಐ) ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳು
- ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ (ಸಿಡಿಪಿಓ)
- ಸ್ವಯಂಸೇವಾ ಸಂಸ್ಥೆಗಳು
- ಆಸ್ಪತ್ರೆಗಳು/ ನರ್ಸಿಂಗ್ ಹೋಂಗಳು
- ಮಕ್ಕಳ ಕಲ್ಯಾಣ ಸಮಿತಿ
- ಮಕ್ಕಳ ನ್ಯಾಯ ಮಂಡಲಿ
- ಜಿಲ್ಲಾ ಮಟ್ಟದಲ್ಲಿ ಮಕ್ಕಳ ರಕ್ಷಣಾ ಕಾರ್ಯಕ್ರಮಗಳು/ ಸೇವೆಗಳ ಮೇಲೆ ನೇರ ಅಥವಾ ಪರೋಕ್ಷ ಪರಿಣಾಮ ಉಂಟು ಮಾಡುವಂತಹ ಇತರ ಪ್ರಾಧಿಕಾರಗಳು/ ಸಂಸ್ಥೆಗಳು/ ವ್ಯಕ್ತಿಗಳು, ಇತ್ಯಾದಿ.


# ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಕಾರ್ಯ ಚಟುವಟಿಕೆಗಳು

## ಜಿಲ್ಲಾ ಮಕ್ಕಳ ರಕ್ಷಣಾ ಘಟಕ

- ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 ಕಲಂ 106ರನ್ವಯ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸ್ಥಾಪನೆಯಾಗಬೇಕೆಂದು ತಿಳಿಸುತ್ತದೆ.
- ಪ್ರತಿ ಜಿಲ್ಲೆಯಲ್ಲಿ 2012ರಿಂದ ಕಾರ್ಯನಿರ್ವಹಿಸುತ್ತಿದೆ.

## ಜಿಲ್ಲಾ ಮಕ್ಕಳ ರಕ್ಷಣಾ ಘಟಕ–ಆಡಳಿತಾತ್ಮಕ ಮಾಹಿತಿ




## ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಗು

### ಮಕ್ಕಳ ನ್ಯಾಯ(ಮಕ್ಕಳ ಪೊಷಣೆ ಮತ್ತು ರಕ್ಷಣೆ) ಕಾಯ್ದೆ–2015ರ ಕಲಂ 2 (14)

1. ಮೇಲ್ನೋಟಕ್ಕೆ ಕಂಡುಬರುವಂತೆ ಜೀವನ ನಿರ್ವಹಣೆಗೆ ಸೂಕ್ತ ಮಾರ್ಗವಿಲ್ಲದಿರುವ ಮಗು.
2. ಭಿಕ್ಷೆ ಬೇಡುತ್ತಿರುವ, ಬಾಲಕಾರ್ಮಿಕ, ಬೀದಿ ಬದಿಯ ಮಗು.
3. ಯಾವ ಮಗುವಿಗೆ ದೈಹಿಕ ಹಿಂಸೆ, ಹಲ್ಲೆಯಾಗಿದೆಯೊ ಅಥವಾ ಆಗುವ ಸಾಧ್ಯತೆಯಿರುವ ಮತ್ತು ದುರುಪಯೋಗ, ಕೊಲೆ, ನಿರ್ಲಕ್ಷ್ಯಕ್ಕೆ ಒಳಗಾದ ಅಥವಾ ಆಗುವ ಸಾಧ್ಯತೆಯಿರುವ ಮಗು.
4. ವಿಕಲಚೇತನ, ಅನಾರೋಗ್ಯದಿಂದ ಬಳಲುತ್ತಿರುವ ಮಗು, ಅಥವಾ ಈ ಸಮಸ್ಯೆಯಿಂದ ಬಳಲುತ್ತಿದ್ದು, ಪಾಲಕ/ಪೋಷಕರು ಅಸಮರ್ಥರಾದಲ್ಲಿ ಅತಂಹ ಮಗು.
5. ಯಾವ ಮಗುವಿಗೆ ಪಾಲಕ/ಪೋಷಕರಿದ್ದು, ಅವರು ಆ ಮಗುವಿನ ಪೋಷಣೆ ಮತ್ತು ರಕ್ಷಣೆಯನ್ನು ನೀಡಲು ಅಸಮರ್ಥರಾದಲ್ಲಿ ಅತಂಹ ಮಗು.
6. ಯಾವ ಮಗುವಿಗೆ ಪಾಲಕ/ಪೋಷಕರಿಲ್ಲವೋ, ಆ ಮಗುವಿನ ಪೋಷಣೆ ಮತ್ತು ರಕ್ಷಣೆಯನ್ನು ನೀಡಲು ಯಾರೂ ಇಲ್ಲದೆ ಪರಿತ್ಯಜಿಸಲ್ಪಟ್ಟ ಮಗು.

7. ಪರಿತ್ಯಜಿಸಿದ, ಬಿಟ್ಟು ಹೋದ, ಕಾಣೆಯಾದ, ತಪ್ಪಿಸಿಕೊಂಡ, ಪತ್ತೆಯಾದ ಮಕ್ಕಳು.
8. ಯಾವುದೇ ರೀತಿಯಲ್ಲಿ ಶೋಷಣೆಗೆ ಒಳಗಾದ ಅಥವಾ ಒಳಗಾಗಬಹುದಾದ ಸಾಧ್ಯತೆಯಿರುವ ಮಗು.
9. ಮಾದಕ ದ್ರವ್ಯ ಸಾಗಾಟಕ್ಕೆ ಬಲಿಯಾದ ಅಥವಾ ಬಲಿಯಾಗಬಹುದಾದ ಸಾಧ್ಯತೆಯಿರುವ ಮಗು.
10. ನೈರ್ಸಗಿಕ ವಿಪತ್ತು, ಕ್ಷೋಬೆ, ಸಶಸ್ತ್ರ ದಂಗೆಗೆ ಗುರಿಯಾಗಿದೆಯೋ.
11. ಯಾವ ಮಗುವಿನ ಮನಸ್ಸು, ದೇಹಗಳನ್ನು ದುಡಿಸಿ, ಧಣಿಸಿ ಆರ್ಥಿಕ ಲಾಭಗಳಿಸುವ ಉದ್ದೇಶ ಹೊಂದಿದ್ದಾರೆಂದು ಪರಿಗಣಿತವಾಗಿದೆಯೋ ಅತಂಹ ಮಗು.
12. ಬಾಲ್ಯವಿವಾಹಕ್ಕೆ ಒಳಗಾದ, ಬಾಲ್ಯವಿವಾಹಕ್ಕೆ ಒಳಗಾಗಬಹುದಾದ ಸಾಧ್ಯತೆಯಿರುವ ಮಗು.

# ಮಕ್ಕಳ ಕಲ್ಯಾಣ ಸಮಿತಿ (ಕಲಂ 31)

- ಪೋಷಣೆ ಮತ್ತು ರಕ್ಷಣೆ ಅವಶ್ಯಕತೆಯಿರುವ ಮಗುವಿನ ಪುನರ್ವಸತಿ ಮತ್ತು ಪುನಃಸ್ಥಾಪನೆಗಾಗಿ ರಚನೆಯಾಗಿರುವ ಸಮಿತಿ. (ರಾಜ್ಯಪಾಲರಿಂದ)
- ಈ ಮಕ್ಕಳ ಕಲ್ಯಾಣ ಸಮಿತಿಯು ಪೋಷಣೆ ಮತ್ತು ರಕ್ಷಣೆ ಅವಶ್ಯಕತೆಯಿರುವ ಮಗುವಿಗೆ ಸಾಂಸ್ಥಿಕ ಸೇವೆ ಅಥವಾ ಅಸಾಂಸ್ಥಿಕ ಸೇವೆಗಳ ಮೂಲಕ ಸೂಕ್ತ ಪುನರ್ವಸತಿಯನ್ನು ಕೈಗೊಳ್ಳುತ್ತದೆ.

# ಸಾಂಸ್ಥಿಕ ಸೇವೆಗಳು

| ಕ್ರ.ಸಂ | ಸಂಸ್ಥೆಯ ಹೆಸರು | | |
|---|---|---|---|
| 1 | ಬಾಲಕರ ಬಾಲಮಂದಿರ (ಹಿರಿಯ–ಕಿರಿಯ) | 10. | ವೀಕ್ಷಣಾಲಯ |
| 2 | ಬಾಲಕಿಯರ ಬಾಲಮಂದಿರ (ಹಿರಿಯ–ಕಿರಿಯ) | 11. | ವಿಶೇಷ ಗೃಹ |
| 3 | ಪೋಷಣೆ ಮತ್ತು ರಕ್ಷಣೆಯ ಮಕ್ಕಳ ಪಾಲನಾ ಕೇಂದ್ರಗಳು | 12. | After Care Home |
| 4 | ನಿರ್ಗತಿಕ ಮಕ್ಕಳ ಕುಟೀರ (ಸ್ವಯಂಸೇವಾ ಸಂಸ್ಥೆ) | 14. | ಸುರಕ್ಷಿತ ಸ್ಥಳ |
| 5 | ಬುದ್ಧಿಮಾಂದ್ಯ ಮಕ್ಕಳ ವಿಶೇಷ ವಸತಿ ಸಹಿತ ಶಾಲೆ | | |
| 6 | ಕಿವುಡ ಮತ್ತು ಮೂಕ ಮಕ್ಕಳ ವಿಶೇಷ ವಸತಿ ಶಾಲೆ | | |
| 7 | ಅರ್ಹ ಸಂಸ್ಥೆಗಳು | | |
| | ದೇವದಾಸಿ ಮಕ್ಕಳಿಗಾಗಿ | | |
| | ಭಾದಿತ ಮಕ್ಕಳಿಗಾಗಿ | | |
| 8. | ವಿಶೇಷ ದತ್ತು ಸಂಸ್ಥೆ | | |
| 9. | ಅರ್ಹ ವ್ಯಕ್ತಿಗಳು | | |

# ಅಸಾಂಸ್ಥಿಕ ಪೋಷಣೆ

- **ದತ್ತು ಕಾರ್ಯಕ್ರಮ.**
- ದತು ಎಂದರೆ ಕಾನೂನುಬದ್ಧವಾಗಿ ಮಗುವನ್ನು ಮತ್ತೊಂದು ಕುಟುಂಬದಲ್ಲಿ ಪುನರಮೀಲನಗೊಳಿಸುವುದಾಗಿದೆ. ದತ್ತು ಮೂಲಕ ಸೇರ್ಪಡೆಯಾದ ಮಗುವಿಗೆ ಕಾನೂನುಬದ್ಧವಾಗಿ ಕುಟುಂಬದಲ್ಲಿ ಲಭ್ಯವಿರುವ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದಿರುತ್ತದೆ.
- ಕೇಂದ್ರ ದತು ಪ್ರಾಧಿಕಾರದ ನಿಯಮಾವಳಿಗಳನ್ವಯ ದತ್ತು ಕಾರ್ಯಕ್ರಮಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುವುದು.
- CARA.NIC.IN

## ಜಿಲ್ಲಾ ಮಕ್ಕಳ ರಕ್ಷಣ ಘಟಕದಿಂದ ಲಭ್ಯವಿರುವ ಸೇವೆಗಳು

### 1. ಆರೈಕೆ, ಸಹಾಯಕ ಮತ್ತು ಪುನರ್ವಸತಿ ಸೇವೆಗಳು

**I. ಕುಟುಂಭಾದಾರಿತ ಸೇವೆಗಳು**

- ಪ್ರಾಯೋಜಕತ್ವ
- ವಿಶೇಷ ಪಾಲನಾ ಯೋಜನೆ
- ಕಾನೂನು ನೆರವು ಸೇವೆಗಳು
- ತುರ್ತು ಸೇವೆಗಳು
- ಮುಖ್ಯ ಮಂತ್ರಿ ಬಾಲ ಸೇವಾ ಯೋಜನೆ
- ಉಪಕಾರ ಯೋಜನೆ

## ಪ್ರಾಯೋಜಕತ್ವ

- ಪ್ರಾಯೋಜಕತ್ವವು ಬಾಹ್ಯ ಸಹಾಯಕ ಹಣಕಾಸು ಸೇವೆಯಾಗಿದ್ದು, ಮಗುವಿನ ಶೈಕ್ಷಣಿಕ, ವೈದ್ಯಕೀಯ,ಪೌಷ್ಠಿಕ ಆಹಾರ ಮತ್ತು ಇತರೆ ಅವಶ್ಯಕತೆಗಾಗಿ ನೀಡಲಾಗುತ್ತದೆ.
- **ಉದ್ದೇಶಗಳು**
- **ತಡೆಟ್ಟುವಿಕೆಗಾಗಿ:** ಅನಾಥ, ನಿರ್ಗತಿಕ, ಬಾಲ್ಯ ವಿವಾಹಕ್ಕೆ ಒಳಗಾದ ಮತ್ತು ಬಾಲ ಕಾರ್ಮಿಕ ಮಕ್ಕಳಿಗಾಗಿ ಮತ್ತು ಅವರ ಮೇಲಾಗುವ ದೌರ್ಜನ್ಯ ತಡೆಗಾಗಿ ನೀಡಲಾಗುತ್ತದೆ.
- **ಪುನರ್ವಸತಿ:** ಬಾಲ ಮಂದಿರಗಳಿಂದ ಕುಟುಂಬಕ್ಕೆ ಪುನರ್ವಸತಿಗೊಂಡ ಮಕ್ಕಳಿಗೆ.

## • ಆರ್ಥಿಕ ನೆರವು

- ಈ ಯೋಜನೆಯಡಿಯಲ್ಲಿ ಪ್ರತಿ ಮಗುವಿಗೆ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿಯಂತೆ ಶಾಲಾವಧಿಯವರೆಗೂ ಮತ್ತು ಗರಿಷ್ಠ 3 ವರ್ಷದವರೆಗೆ ಮತ್ತು ವಿಶೇಷ ಸಂದರ್ಭದಲ್ಲಿ ಮುಂದುವರೆಸಬಹುದಾಗಿದೆ ಅಥವಾ 18 ವರ್ಷ ತುಂಬುವವರೆಗೂ ಇದರಲ್ಲಿ ಯಾವುದೋ ಮೊದಲೂ ಅದು.

## • ಅನರ್ಹತೆಗಳು

- ಮಗುವು ಅನಾರೋಗ್ಯಕ್ಕೆ ಈಡಾಗಿ ಮತ್ತು ಪೋಷಕರು ಮಗುವನ್ನು ನೋಡಿಕೊಳ್ಳಲು ಅಸಮರ್ಥರಾದಾಗ
- ಮಗು ತಪ್ಪದೆ ಶಾಲೆ/ಅಂಗನವಾಡಿ ಕ್ರಮವಾಗಿ ಹೋಗುತ್ತಿರಬೇಕು.
- ಮಗುವಿಗೆ ಕಾಲ ಕಾಲಕ್ಕೆ ರೋಗ ನಿರೋಧಕ ಚುಚ್ಚುಮದ್ದು ಹಾಕಿಸಬೇಕು.

## ವಿಶೇಷ ಪಾಲನಾ ಯೋಜನೆ

- ಈ ಯೋಜನೆಯು ಎಚ್.ಐ.ವಿ ಸೋಂಕಿತ ಮತ್ತು ಭಾದಿತ ಮಕ್ಕಳಿಗಾಗಿ ನೀಡಲಾಗುತ್ತದೆ.
- ಪ್ರತಿ ತಿಂಗಳೂ 1000/–ರೂಪಾಯಿಯಂತೆ ಮಗುವಿನ ಖಾತೆಗೆ ವರ್ಗಾಯಿಸಲಾಗುತ್ತಿದೆ.

### ನಿಭಂದನೆಗಳು

- ಮಗು 18 ವರ್ಷದೊಳಗಿರಬೇಕು.
- ಒಂದು ಕುಟುಂಬಕ್ಕೆ 1 ಮಗುವಿಗೆ ನೀಡಲಾಗುತ್ತದೆ.
- ಈ ಸೌಲಭ್ಯ ಪಡೆಯುವ ಕುಟುಂಬದ ಮಕ್ಕಳು ಕಡ್ಡಾಯವಾಗಿ ಶಾಲೆಗೆ ಹೋಗುತ್ತಿರಬೇಕು.
- ಗ್ರಾಮ ಮಟ್ಟದ ಆರೋಗ್ಯ ನೈರ್ಮಲ್ಯ ಸಮಿತಿಯ ಮುಂದೆ ಸೋಂಕಿತ ಮತ್ತು ಭಾದಿತ ಎಂದು ಗುರುತಿಸಲು ನಿರಾಕರಿಸುವಂತಿಲ್ಲಾ.
- ಎ.ಆರ್.ಟಿಯ ಚಿಕಿತ್ಸೆಯ ದೃಡೀಕೃತ ಪ್ರತಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ.

# ಮುಖ್ಯಮಂತ್ರಿ ಬಾಲಸೇವಾ ಯೋಜನೆ

- ಕೋವಿಡ್–19 ಸೋಂಕಿನಿಂದ ಇಬ್ಬರು ಪಾಲಕರನ್ನು ಕಳೆದುಕೊಂಡ ಮಕ್ಕಳು.
- ದಿನಾಂಕ: 1.04.2020ರ ಪೂರ್ವದಲ್ಲಿ ಯಾವುದೊ ಕಾರಣಕ್ಕೆ ಒಬ್ಬ ಪಾಲಕರನ್ನು ಕಳೆದುಕೊಂಡು, ಕೋವಿಡ್–19ನಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳು ಅರ್ಹರು.
- ಕಾನೂನುಬದ್ಧ ಪಾಲಕರನ್ನು, ಕೋವಿಡ್‌ನಿಂದ ಕಳೆದುಕೊಂಡ ಮಕ್ಕಳು.

- ಆಯ್ಕೆಯಾದ ಮಕ್ಕಳಿಗೆ ಪ್ರತಿ ತಿಂಗಳು **ರೂ. 3.500/–** ಅನುದಾನವನ್ನು ನೇರವಾಗಿ ಮಕ್ಕಳ ಖಾತೆಗೆ ವರ್ಗಾಯಿಸಲಾಗುತ್ತದೆ.
- ಆಯ್ಕೆಯಾದ **ಎಸ್.ಎಸ್.ಎಲ್.ಸಿ ಪೂರ್ಣಗೊಂಡ ಮಕ್ಕಳಿಗೆ ಟ್ಯಾಬ್/ಲ್ಯಾಪಟಾಪ್.**
- ಆಯ್ಕೆಯಾದ ಹೆಣ್ಣು ಮಗುವಿಗೆ 21 ವರ್ಷ ತುಂಬಿದ ನಂತರ ಉನ್ನತ ಶಿಕ್ಷಣ, ಸ್ವ ಉದ್ಯೋಗಕ್ಕಾಗಿ ರೂ. 1 ಲಕ್ಷ ನೀಡಲಾಗುತ್ತದೆ.

# ಪಿ.ಎಮ್. ಕೇರ್ಸ್

- ಕೋವಿಡ್–19 ಸೋಂಕಿನಿಂದ ಇಬ್ಬರು ಪಾಲಕರನ್ನು ಕಳೆದುಕೊಂಡ ಮಕ್ಕಳು.
- ದಿನಾಂಕ: 1.04.2020ರ ಪೂರ್ವದಲ್ಲಿ ಯಾವುದೊ ಕಾರಣಕ್ಕೆ ಒಬ್ಬ ಪಾಲಕರನ್ನು ಕಳೆದುಕೊಂಡು, ಕೋವಿಡ್–19ನಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳು ಅರ್ಹರು.
- ಕಾನೂನುಬದ್ಧ ಪಾಲಕರನ್ನು, ಕೋವಿಡ್‌ನಿಂದ ಕಳೆದುಕೊಂಡ ಮಕ್ಕಳು.
- ಆಯ್ಕೆಯಾದ ಮಗುವಿಗೆ 23 ವರ್ಷ ಪುರ್ಣಗೊಂಡ ನಂತರ ರೂ. 10 ಲಕ್ಷ ಅನುದಾನ ಮಗುವಿನ ಖಾತೆಗೆ ವರ್ಗಾಯಿಸಲಾಗುತ್ತದೆ.


# ಉಪಕಾರ ಯೋಜನೆ.

- ಮಕ್ಕಳ ಕಲ್ಯಾಣ ಸಮಿತಿ/ಬಾಲ ನ್ಯಾಯ ಮಂಡಳಿಯ ಮೂಲಕ ಮಕ್ಕಳ ಕಲ್ಯಾಣ ಸಮಿತಿಗೆ ದಾಖಲಾಗಿರತಕ್ಕದ್ದು.
- 18 ವರ್ಷ ಪೂರ್ಣಗೊಂಡ ಮಕ್ಕಳಾಗಿರಬೇಕು.
- ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕನಿಷ್ಠ ಮೂರು ವರ್ಷ ದಾಖಲಾಗಿದ್ದು, ನಂತರ ಮಕ್ಕಳ ಕೌಟುಂಬಿಕ ಪುನರಮೀಲನಗೊಂಡ ಮಕ್ಕಳು ಈ ಯೋಜನೆಯಡಿಯಲ್ಲಿ ಅರ್ಹರು.
- ಪ್ರತಿ ತಿಂಗಳು ರೂ.5000/–ಅನುದಾನ ಮಗುವಿನ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ.
- ಗರಿಷ್ಠ 03 ವರ್ಷ ಅಥವಾ ಮಗು ಆರ್ಥಿಕವಾಗಿ ಸಬಲವಾಗುವವರೆಗೂ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಅನುದಾನ.

# ಮಕ್ಕಳ ನಿಧಿ

- ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015 ರ ಕಲಂ 105ರಡಿಯಲ್ಲಿ ಸ್ಥಾಪಿತವಾಗಿರುವ ನಿಧಿ.
- ಲೈಂಗಿಕ ಹಲ್ಲೆಗೆ ಒಳಗಾದ ಮಗುವಿನ ತುರ್ತು ವೆಚ್ಚಕ್ಕಾಗಿ ರೂ. 5000/– ದಿಂದ ರೂ. 10.000/– ಅನುದಾನವನ್ನು ನೀಡಬಹುದಾಗಿದೆ.






**“ಸರಕಾರ ಈ ದೇಶದ ಪ್ರತಿಯೊಂದು ಮಗುವಿನ/ಮಕ್ಕಳ ಕಾನೂನಾತ್ಮಕ ಪೋಷಕ”**

**ಮಕ್ಕಳ ಶಿಕ್ಷಣ ಮತ್ತು ಸಂರಕ್ಷಣೆ ನಮ್ಮೆಲ್ಲರ ಹೊಣೆ**

**ಧನ್ಯವಾದಗಳು**

ಕೊಣಿಲ ರಾಘವೇಂದ್ರ ಭಟ್,
ಪ್ರಾದೇಶಿಕ ಸಂಯೋಜಕರು,
ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ
ಕೊಪ್ಪಳ–583231. ದೂರವಾಣಿ: 9845699735.
ಮಿಂಚಂಚೆ : krbunicef@gmail.com



unicef
for every child